Reg. No. M. 1550.
if not delivered please return to
"KODAGU" OFFICE MERCARA.

ಕೊಡಗು.

ಸಕ್ಕೇನ ಭೂತದಯಯಾನಿವಿದ್ಯಾ ವೀತಕ್ಲಿಷ್ಟಾಂತ್ಮಕಾನಾಂ ಜಕ್ಕವುಮಕ್ಕೇನ ದೇಶಾನಾಂ ಸುಸ್ಥಿರಾ ರಾಜ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೩ನೇ ಇಸವಿ ಜನವರಿ ತಾರೀಕು ೬ನೇ ಶುಕ್ರವಾರ. | ಸಂಚಿಕೆ ೩೧

SARI-PIN.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

BRACELETS.
Gold Rs. 10
Set rubys forming any letter Rs. 12

NECKCHAINS.

NOSE-RINGS.
Diamond in small size of best quality Rs. 35
& upwards according to size.

MARRIAGE PRESENTATIONS

Attractive and inexpensive articles ready in stock. Frompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.
Silver Guindys, Photo lockets, Dimond nose-screws, cut-ruby ear-rings, etc., etc., etc., in all prices. Very attractive. Prices most moderate.

Estimates free on enquiry.

V. Subramaniyer
Jeweller,

Designs free on enquiry.

Telegrams: 'PRECIOUS.'

Telephone: 3145.

CATALOGUE ON ENQUIRY.

Post Box 423, Triplicane, P. O., MADRAS.

52–6

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.
ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

52–17

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅಜವಿರ್.

ನಮ್ಮ ನಿರ್ವಹಣೆಯ ವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ಷಾದಾಯ	ಮೇಲ್ಪಟ್ಟ ಮೂಲಧನ	ಖರ್ಚು ವರಮಾನದ ಶೇಕಡ
1911	46,248	49,442	82.9
1921	2,92,627	6,53,350	43 2
1931	12,50,000	40,00 000	28.2

ಬೋನಸ್ಸು.

ಕುರ್ತು ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½.

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತ್ತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮುಚಂದ್ರರಾವ್,
ಸುಪರಿಂಟಿಂಡೆಂಟ್,
ಮಿಂಟೋ ಆಸ್ಪತ್ರೆ ಒಳ,
ಬೆಂಗಳೂರು.

52—36

ಕೊಡಗು.

ಸನ್ ೧೯೩೩ನೇ ಇಸವಿ

ಜನವರಿ ತಾ. ೬ನೇ ಶುಕ್ರವಾರ.

ಪ್ರಸ್ತಾಪಗಳು

ಜಾರಿಯಲ್ಲಿರುವ ವರೆಗೆ

ನನ್ನ

ಅಗ್ರಲೇಖನ

ಪ್ರಕಟಿಸುವುದಿಲ್ಲ.

ಗಾಂಧೀಜೀಯವರ ಪ್ರಕಟಣೆ.

ಉಪವಾಸ ವ್ರತವನ್ನು ವಾಪಸ್ಸಕ್ಕೆ ತೆಗೆದುಕೊಳ್ಳುವದರ ಕಾರಣ.

ಮಲಬಾರಿನ ಗುರುವಾಯೂರು ದೇವಸ್ಥಾನವನ್ನು ಹರಿಜನರ ಪ್ರವೇಶಕ್ಕೆ ಬಿಡಬೇಕೆಂದೂ, ಹಾಗೆ ಬಿಡದೆ ಹೋದರೆ ತಾನು 1933ನೇ ಜನವರಿ ತಾ. 2ರಲ್ಲಿ ಉಪವಾಸವನ್ನು ಕೈಕೊಳ್ಳುತ್ತೇನೆಂದೂ ಮಹಾತ್ಮ ಗಾಂಧಿಯವರು 3 ತಿಂಗಳ ಹಿಂದೆ ನಿಶ್ಚಯಿಸಿದ್ದರು. ಗುರುವಾಯೂರು ದೇವಸ್ಥಾನವಿರುವ ಪೊನ್ನಾನಿ ತಾಲೂಕಿನಲ್ಲಿ ಈ ವಿಷಯವನ್ನು ಕುರಿತು ಜನರ ಓಟು ತೆಗೆದ ಮೇಲೆ, ಮಹಾತ್ಮರು—ಮೆ. ಸಿ. ರಾಜಗೋಪಾಲಾಚಾರ್ಯರು, ಮೆ. ಕೇಳಪ್ಪ ನಾಯರು, ಮೆ. ಮಾಧವ ನಾಯರು ಮೊದಲಾದ ಮುಖಂಡರೊಡನೆ ದೀರ್ಘ ಚರ್ಚೆ ನಡಿಸಿ, ತಾ. 2ರಲ್ಲಿ ಪ್ರಾರಂಭಿಸಬೇಕಾಗಿದ್ದ ಉಪವಾಸ ವ್ರತವನ್ನು ತತ್ಕಾಲ ಕೈಕೊಳ್ಳುವದಿಲ್ಲವೆಂದು ತೀರ್ಮಾನಿಸಿ, ಅದಕ್ಕೆ ಕಾರಣಗಳನ್ನು ಒಂದು ಪ್ರಕಟಣೆಯಲ್ಲಿ ಹೊರಗೆಡವಿರುವರು. ಅದರ ಸಾರಾಂಶವು ಈ ಕೆಳಗೆ ಕೊಡಲಾಗಿದೆ.

'ಹರಿಜನರ ಗುರುವಾಯೂರು ದೇವಾಲಯ ಪ್ರವೇಶ ವಿಚಾರವಾಗಿ ಪೊನ್ನಾನಿ ತಾಲೂಕಿನ ಪ್ರಜೆಗಳಿಂದ ತೆಗೆದುಕೊಳ್ಳಲ್ಪಟ್ಟ ಓಟುಗಳ ಫಲಿತಾಂಶವನ್ನು ರಾಜಗೋಪಾಲಾಚಾರ್ಯರು, ಕೇಳಪ್ಪನ್‌ರವರು ಮತ್ತು ಮಾಧವನ್ನಾಯರು ತಿಳಿಸಿದರು. ಇದರಿಂದ ಶೇಕಡ 77ರಂತೆ ಜನರು ಅನುಕೂಲಾಭಿಪ್ರಾಯವನ್ನು ಕೊಟ್ಟಿರುವುದಾಗಿ ವ್ಯಕ್ತವಾಗುತ್ತದೆ. ದೇವಾಲಯ ಪ್ರವೇಶಕ್ಕೆ ಅರ್ಹತೆಯಿಲ್ಲದವರು, ದೇವಾಲಯಗಳಲ್ಲಿ ನಂಬಿಕೆಯಿಲ್ಲದ ಆರ್ಯ ಸಮಾಜದವರು ಮೊದಲಾದವರುಗಳಿಂದ ಓಟುಗಳು ತೆಗೆದುಕೊಳ್ಳಲ್ಪಡಲಾಗದೆಂದು ಕಟ್ಟುನೂಡಲ್ಪಟ್ಟಿದ್ದಂತೆಯೇ ನಡೆದಿರುವುದು. ಇಷ್ಟು ಸಮರ್ಪಕವಾಗಿ ಮತ್ತು ಜಾಗ್ರತೆಯಾಗಿ ಹಿಂದೆ ಯಾವಾಗಲೂ ಓಟು ತೆಗೆದುಕೊಳ್ಳಲ್ಪಟ್ಟಿರಲಿಲ್ಲ. ಹೀಗಿದ್ದಾಗ್ಯೂ, ಈ ವಿಚಾರದಲ್ಲಿ ಯಾವ ಸಹಾಯವನ್ನೂ ನೂಡದಿದ್ದ ಜಾಮರಿನ್‌ರವರು ಅಸ್ಪೃಶ್ಯರಿಂದಲೂ, ಆರ್ಯ ಸಮಾಜದವರಿಂದಲೂ, ಬಲವಂತದಿಂದಲೂ ಓಟುಗಳು ತೆಗೆದುಕೊಳ್ಳಲ್ಪಟ್ಟವೆಂದು ನಿಂದಿಸುತ್ತಿರುವರು. ಪ್ರಕೃತಾಂದೋಳನದಿಂದ ಗುರುವಾಯೂರು ದೇವಸ್ಥಾನಕ್ಕೆ ಜಗದ್ವಿಖ್ಯಾತಿಯುಂಟಾಯಿತು. ನಾನೂ ಕೇಳಪ್ಪನವರೂ ಪ್ರಾಯೋಪವೇಶವನ್ನು ನೂಡುತ್ತೇವೆಂಬುದರ ಮೇಲೆ ಒನರು ಓಟನ್ನು ಕೊಟ್ಟರೆಂದು ಸನಾತನರು ಈಗ ಹೇಳಲವಕಾಶವಿರುವುದಿಲ್ಲ. ಯಾಕೆಂದರೆ, ಅನೇಕ ಸ್ತ್ರೀ ಪುರುಷರು ಪ್ರತಿಕೂಲವಾಗಿ ಓಟು ಕೊಟ್ಟಿರುತ್ತಾರೆ. ದೇವಾಲಯ ಸಮಿಪವಾಸಿಗಳು ಅನುಕೂಲರಾಗಿರುತ್ತಾರೆಂದು ಕೇಳಪ್ಪನವರು ಹೇಳುತ್ತಿದ್ದುದು ಈಗ ನಿಜವಾಗಿ ಪರಿಣಮಿಸಿರುತ್ತದೆ. ಡಾ. ಸುಬ್ಬಾಯನ್‌ರವರು ನಿಲ್ಲನ್ನು ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಪ್ರವಾದಿಸಲು ಈ ಜನವರಿ ತಾ. 15 ರೊಳಗೆ ವೈಸರಾಯರು ಅನುಮತಿಯನ್ನು ಕೊಡಲಾರರೆಂದು ಪ್ರಭುತ್ವದವರು ತಿಳಿಸಿರುತ್ತಾರೆ. ಈ ಕಾರಣಗಳಿಂದ ಈ ತಾ. 2 ರಲ್ಲಿ ಪ್ರಾರಂಭಿಸಬೇಕೆಂದಿದ್ದ ಉಪವಾಸವನ್ನು ಈಗಕ್ಕೆ ಬಾಕಿ ನೂಡಿರುತ್ತೇನೆ. ಅಲ್ಲದೆ ವೈಸರಾಯರ ನಿರ್ಣಯವು ಗೊತ್ತಾಗುವ ವರೆಗೂ ನಾನು ಉಪವಾಸವನ್ನು ಪಕ್ಕಮಿಸುವುದಿಲ್ಲ. ಹೀಗೆ ನೂಡಲು ಕೇಳಪ್ಪನವರೂ ಸಮ್ಮತಿಸಿರುತ್ತಾರೆ. ಉಪವಾಸವು ಮತಕ್ಕೆ ಸಂಬಂಧಪಟ್ಟುದರಿಂದ ಅದನ್ನು ವಿವರಿಸಬೇಕಾದುದಿಲ್ಲ. ಪ್ರಜೆಗಳಲ್ಲಿ ಜ್ಞಾನೋದಯವನ್ನುಂಟು ಮಾಡುವುದೇ ಅದರ ಮುಖ್ಯೋದ್ದೇಶ. ಸಮಾಜದಲ್ಲುಂಟಾದ ದುರಾಚಾರಗಳನ್ನು ಶಾಸನದ ಮೂಲಕ ತೊಲಗಿಸಲಾಗದಿದ್ದಾಗ್ಗೆ ತಪಸ್ಸು ಮಾಡಬೇಕೆಂದು ಧರ್ಮಶಾಸ್ತ್ರಗಳು ಬೋಧಿಸುತ್ತವೆ. ಈ ತಪಗಳಲ್ಲಿ ಉಪವಾಸವು ಅತ್ಯಂತ ಕಠಿಣವಾದುದು. ಆದುದರಿಂದ ನನ್ನ ಉಪವಾಸವು ಹೊಸದೇನೂ ಅಲ್ಲ. ನನಗೆ ಪ್ರಜೆಗಳ ಮೇಲೆ ಅಭಿಮಾನವಿಲ್ಲದಿದ್ದರೆ ನಾನು ಉಪವಾಸಮಾಡಿದಾಗ್ಯೂ ಯಾರೂ ಗಣನೆಗೆ ತರುವುದಿಲ್ಲ.

ಪೂರ್ವದಲ್ಲಿ ಹಿಂದೂ ಮತಕ್ಕಿದ್ದ ಪವಿತ್ರತೆಯೊಗಲೀ ಚೈತನ್ಯವಾಗಲೀ ಈವಾಗಿಲ್ಲವೆಂದು ನಾನು ನಂಬುತ್ತೇನೆ. ಕಾಲಾನುಗುಣವಾಗಿ ಹಿಂದೂ ಮತಧರ್ಮವು ಬದಲಾಯಿಸಲ್ಪಡುತ್ತಿದ್ದಿತೆಂಬುವುದಕ್ಕೆ ಧರ್ಮಶಾಸ್ತ್ರಗಳೇ ಪ್ರಬಲ ನಿದರ್ಶನವಾಗಿವೆ. ಆದರೆ ಈಚೆಗೆ ಅಂಥಾ ಬದಲಾವಣೆಯು ನಿರೋಧಿಸಲ್ಪಟ್ಟಿರುವುದು. ಈಗಿನವರು ಶಾಸ್ತ್ರದಲ್ಲಿರುವ ವಾಕ್ಯಗಳು ಬಾಹ್ಯಾರ್ಥವನ್ನು ನಂಬಿಕೊಂಡಿರುವರು. ಪೂರ್ವಿಕರು ಮಾತ್ರ ಪರಮಾತ್ಮನನ್ನು ದಿವ್ಯ ಜ್ಞಾನದೃಷ್ಟಿಯಿಂದ ನೋಡಲು ಸಾಧಕವಾದ ಶಾಸ್ತ್ರ ವಾಕ್ಯಗಳ ನಿಜಾರ್ಥವನ್ನು ಅರಿತುಕೊಳ್ಳುತ್ತಿದ್ದರು. ಪೂರ್ವಿಕರಿಗೆ ಮಾತ್ರ ಅಂಥಾ ಶಕ್ತಿ ಇದ್ದಿತು; ಅವರ ಸಂತತಿಯವರಾದ ಈ ನನಗೆ ಯಾವ ಶಕ್ತಿಯೂ ಇಲ್ಲ. ಆದುದರಿಂದ ಅವರು ಮಾಡುವ ಶಾಸ್ತ್ರಾರ್ಥವು ವಿಪರೀತವಾದುದರಿಂದ ಅವು ವಾದದಲ್ಲಿ ನಿಲ್ಲುವುದಿಲ್ಲ. ಈ ಕಾಲದ ತಪಸ್ಸು ಸಹ ಬರೇ ಬಾಹ್ಯ ಕ್ರಿಯೆ ಆಗಿರುವುದಲ್ಲದೆ ಆಂತರಂಗಿಕವಾಗಿರುವುದಿಲ್ಲ. ಅನೇಕತ್ವದಲ್ಲಿ ಏಕತ್ವವನ್ನು ಪಡೆಯುವುದೇ ಹಿಂದೂ ಧರ್ಮದ ಪರಮಾರ್ಥವು. ಇದನ್ನನುಸರಿಲು ಸರ್ವ ಪ್ರಕಾರದಿಂದ ಪ್ರಯತ್ನಿಸುತ್ತಿರುವುದರಿಂದ ನಿರಶನ ವ್ರತವನ್ನು ಹಿಡಿಯಲು ನನಗೆ ಅರ್ಹತೆ ಇರುವುದಲ್ಲದೆ ಭಗವಂತನ ಪ್ರೇರಣೆಯೂ ಹಾಗೆಯೇ ಆಗಿರುತ್ತದೆ. ಇದರಲ್ಲಿ ಯಾವ ನಿರ್ಬಂಧವೂ ಇಲ್ಲ. ನಾನು ಉಪವಾಸವನ್ನು ಮಾಡುತ್ತೇನೆಂದು ತಿಳಿದಿದ್ದರೂ ಕೆಲವರು ತಮ್ಮ ನಂಬಿಕೆಗೆ ವಿರೋಧವಾಗಿ ಅಂದರೆ ದೇವಾಲಯ ಪ್ರವೇಶಕ್ಕೆ ಅನುಕೂಲವಾಗಿ ಓಟು ಕೊಟ್ಟಿಲ್ಲವಾದುದರಿಂದ ನನ್ನ ವ್ರತವು ನಿರ್ಬಂಧವಿಲ್ಲವೆಂದು ಸ್ಪಷ್ಟಪಡುತ್ತದೆ. ಗುರುವಾಯೂರು ದೇವಾಲಯ ಪ್ರವೇಶಕ್ಕಾಗಿ ನಾನು ಉಪವಾಸ ಮಾಡಲೆತ್ನಿಸಿದೆನು. ಮುಂದಾದರೂ ಹಾಗೆ ಮಾಡಲು ಹಿಂಜರಿಯುವುದಿಲ್ಲ. ಸನಾತನ ಸುಧಾರಕರು ಸರಿಯಾಗಿ ಕೆಲಸ ಮಾಡದಿದ್ದರೆ, ಈ ವರೆಗಾಗಿರುವ ಕೋರ್ಟಿನ ತೀರ್ಪುಗಳು, ಧರ್ಮದಾಯ ಶಾಸನಗಳು ಮೊದಲಾದುವುಗಳಿಂದುಂಟಾಗಿರುವ ವಿರೋಧಗಳನ್ನು ತೊಲಗಿಸದಿದ್ದರೆ ನಾನು ಪುನಃ ಉಪವಾಸ ಮಾಡಬೇಕಾಗುವದು. 'ಇನ್ನು ಮುಂದೆ ಯಾರೂ ಜನ್ಮತಃ ಅಸ್ಪೃಶ್ಯರೆಂದು ಭಾವಿಸಲ್ಪಡಕೂಡದು. ಈ ವರೆಗೆ ಅಸ್ಪೃಶ್ಯರೆಂದು ಕರೆಯಲ್ಪಡುತ್ತಿದ್ದವರು ಕೆರೆ, ಬಾವಿ, ದೇವಸ್ಥಾನ, ಮೊದಲಾದ ಬಹಿರಂಗ ಸ್ಥಳಗಳಿಗೆ ಬರಲು ನಿರ್ಬಂಧವಿರಕೂಡದು. ಸ್ವರಾಜ್ಯ ಪಾರ್ಲಿಮೆಂಟು ಏರ್ಪಡುವುದರೊಳಗಾಗಿ ಈ ಹಕ್ಕುಗಳನ್ನು ಪ್ರಭುತ್ವದವರು ಸ್ಥಿರ ಪಡಿಸಿದರೆ ಸ್ವರಾಜ್ಯ ಪಾರ್ಲಿಮೆಂಟಿನವರೂ ಮೊಟ್ಟವೊದಲು ಸ್ಥಿರಪಡಿಸಬೇಕಾಗುವದು. ಹರಿಜನರಿಗೀಗಿರತಕ್ಕ ತೊಂದರೆಗಳನ್ನು ಯಾವ ನಿರೋಧವೂ ಇಲ್ಲದೆ ಶಾಂತಿಯಿಂದ ತೊಲಗಿಸುವುದು ನಾಯಕರುಗಳ ಮುಖ್ಯ ಕರ್ತವ್ಯವಾಗಿರುತ್ತದೆ' ಎಂದು ಪೂನಾದಲ್ಲಿ ಹರಿಜನರಿಗೂ ಸವರ್ಣದವರಿಗೂ ಆಗಿರುವ ಒಡಂಬಡಿಕೆಯು ಬೊಂಬಾಯಿ ಸಭೆಯಲ್ಲಿ ಸ್ಥಿರಗೊಳಿಸಲ್ಪಟ್ಟಿತು. ಆದುದರಿಂದ ಬೊಂಬಾಯಿ ತೀರ್ಮಾನವನ್ನು ಮಾತಿನಿಂದಾಗಲೀ, ಕಾರ್ಯದಿಂದಾಗಲೀ, ಬರಹದಿಂದಾಗಲೀ, ಮೌನದಿಂದದಾಗಲೀ ಅಂಗೀಕರಿಸಿರುವವರಿಗೂ ನನಗೂ ಅಸ್ಪೃಶ್ಯತೆಯನ್ನು ಸಂಪೂರ್ಣವಾಗಿ ತೊಲಗಿಸುವವರೆಗೆ ಮನಶಾಂತಿ ಎಂದಿಗೂ ಉಂಟಾಗುವುದಿಲ್ಲ. ಅಸ್ಪೃಶ್ಯತೆಯನ್ನು ದಹನ ಮಾಡಿ ಅವರ ಭಸ್ಮಧಾರಣೆ ಮಾಡಿದರೇನೆಯೇ ಹಿಂದೂ ಮತವು ಪುನೀತವಾಗುವುದು. ಮತ್ತು ಚೈತನ್ಯವನ್ನು ಹೊಂದಿ ಪ್ರಪಂಚವನ್ನೆಲ್ಲ ಚೇತನಯುಕ್ತವಾಗಿ ಮಾಡುವಂತಾಗುವುದು.

ಕೊಡಗಿನ ಭವಿಷ್ಯತ್ತು.

(ಬರೆದು ಬಂದದ್ದು.)

ಕೊಡಗಿಗೆ ಸಂಪೂರ್ಣ ಜವಾಬ್ದಾರಿ ಸರ್ಕಾರ ಪದ್ಧತಿಯನ್ನು ಏರ್ಪಡಿಸಿ ಕೊಡಬೇಕೆಂದೂ, ಅಂಥಾ ಪ್ರಜಾ ಜವಾಬ್ದಾರಿ ಸರ್ಕಾರವನ್ನು ಪ್ರಜಾ ಜನರಿಗೆ ಪ್ರಯೋಜನವಾಗುವಂತೆ ನಡಿಸಲು ಸಾಧ್ಯವಾಗಲು ಇಂಡಿಯಾ ಸರ್ಕಾರವು ಧನ ಸಹಾಯ ಕೊಡಬೇಕೆಂತಲೂ ಮಡಿಕೇರಿಯಲ್ಲಿ ತಾರೀಕು 18—12—32ರಲ್ಲಿ ನಡೆದ ಎಂಟುಗಿನಲ್ಲಿ ಸರ್ವಸಮ್ಮತದಿಂದ ತೀರ್ಮಾನವಾಗಿದೆ. ಇದು ಸಾಧ್ಯವಾಗದಿದ್ದರೆ ಮುಂದೆ ಏನು ಮಾಡಬೇಕೆಂಬ ವಿಷಯದಲ್ಲಿ ಮತಭೇದವಿದೆ ಎಂತ ಒಪ್ಪುತ್ತೇನೆ. ಆ ಎರಡನೇ ಭಾಗದ ಕುರಿತು ಈ ಲೇಖನದಲ್ಲಿ ಚರ್ಚಿಲು ಇಚ್ಛಿಸುವುದಿಲ್ಲ. ಆದರೆ ಸರ್ವ ಪಕ್ಷದವರು ಒಗ್ಗಟ್ಟಿನಿಂದ ಒಪ್ಪಿಕೊಂಡ ಭಾಗವನ್ನು ದೇಶದವರು ಬಹು ಜಾಗರೂಕತೆಯಿಂದ ಕಾಪಾಡಿಕೊಳ್ಳಬೇಕು

ದೇಶಕ್ಕೆ ಏನು ಬೇಕೆಂಬ ವಿಷಯದಲ್ಲಿ ದೇಶದ ಜನರು ಒಗ್ಗಟ್ಟಿಗೆ ಬರಲಿಲ್ಲವೆಂತಲೂ, ಏನು ಬೇಕೆಂಬ ಅಭಿಪ್ರಾಯವೇ ಜನರಲ್ಲಿ ಹುಟ್ಟಲಿಲ್ಲವೆಂತಲೂ ಸ್ಥಳೀಯ ಸರ್ಕಾರವು ಈ ವರೆಗೆ ಹೇಳಿಕೊಳ್ಳುತಿತ್ತು. ಈ ಒಗ್ಗಟ್ಟಿನಿಂದ ಆದ ತೀರ್ಮಾನವನ್ನು ಮನ್ನಿಸಲು ಸರ್ಕಾರಕ್ಕೆ ಅಪೇಕ್ಷ ಇದ್ದರೆ, ಈಗ ಲಂಡನ್ನಿನಲ್ಲಿ ತಯಾರಾಗುತ್ತಿರುವ ರಾಜಕೀಯ ಸುಧಾರಣೆಯನ್ನು ಕೊಡುವ ಬಿಲ್ಲಿನಲ್ಲಿ ಕೊಡಗಿನಲ್ಲೂ ಪ್ರಜಾ ಜವಾಬ್ದಾರಿ ಸರ್ಕಾರವನ್ನು ಏರ್ಪಡಿಸುವ ಹಕ್ಕನ್ನು ನಮೂದಿಸುವಂತೆ ಬ್ರಿಟಿಷ್ ಸರ್ಕಾರಕ್ಕೆ ಇಂಡಿಯಾ ಸರ್ಕಾರವು ತಿಳಿಸಬೇಕು. ಕೊಡಗಿನ ಸರ್ಕಾರಕ್ಕೆ ಇಂಡಿಯಾ ಸರ್ಕಾರವು ಹಣದ ಸಹಾಯ ಕೊಡಬೇಕೆಂತ ಕೇಳುವುದರಲ್ಲಿ ಅಸಾಧ್ಯ ವಿಷಯವೇನೂ ಇಲ್ಲ. ಇಂಡಿಯಾ ಸರ್ಕಾರವು 1924ಕ್ಕಿಂತ ಮೊದಲು ತೆಗೆದುಕೊಂಡು ಹೋದ ಸುಮಾರು ಒಂದು ಕೋಟಿ ರೂಪಾಯಿಗೆ ಬಡ್ಡಿಯನ್ನು ಕೊಡಬೇಕಾದದ್ದು ನ್ಯಾಯವಲ್ಲವೇ? ಕೊಡಗಿನಲ್ಲಿ 1924ಕ್ಕಿಂತ ಮೊದಲು ಕೆಲಸ ಮಾಡಿದವರ ಪೆನ್ಶನ್ ವಗೈರೆ ಜವಾಬ್ದಾರಿಯನ್ನು ಕೊಡಗಿನ ಸರ್ಕಾರವು ವಹಿಸಿಕೊಳ್ಳಬೇಕೆಂತ ಇಂಡಿಯಾ ಸರಕಾರವು ಕೇಳುವಾಗ ಅದೇ ಕಾಲದಲ್ಲಿ ಇಂಡಿಯಾ ಸರ್ಕಾರವು ಉಳಿಸಿಕೊಂಡ ಹಣದ ಬಡ್ಡಿಯನ್ನು ಇಂಡಿಯಾ ಸರ್ಕಾರವು ಕೊಡಬೇಕಾದದ್ದು ನ್ಯಾಯಕ್ಕೂ, ಧರ್ಮಕ್ಕೂ ಒಪ್ಪಿಗೆಯಾದ ಮಾತಾಗಿದೆ.

ಬೇರೆ ದೊಡ್ಡ ಸಾಮ್ರಾಜ್ಯಗಳಿಗೆ ಪ್ರಜಾ ಜವಾಬ್ದಾರಿ ಸರ್ಕಾರವನ್ನು ಕೊಡುವಾಗ ಕೊಡಗು ಮಾತ್ರ ಕೈ ಜೋಡಿಸಿಕಾದು ಕೂಡಬೇಕೆಂತ ಸ್ಥಳೀಯ ಸರಕಾರವಾಗಲೀ, ಅವರ ಅನುಯಾಯಿಗಳಾಗಲೀ ಹೇಳಿದರೆ ಯಾರೂ ಕೇಳಬಾರದು. ಅಂಥಾ ಮಾತಿಗೆ ಬರುಳಾಗ ಕೂಡದು. ಕೊಡಗಿಗೆ ಪ್ರಜಾ ಜವಾಬ್ದಾರಿ ಸರಕಾರವಿಲ್ಲದಿದ್ದರೂ ಚಿಂತೆಯಿಲ್ಲ. ಮೈಸೂರಿಗೋ, ಮದ್ರಾಸಿಗೋ ಸೇರಿಸಬಾರದೆಂಬ ಶರಾವಿಗೆ ಒಪ್ಪಿಗೆ ಕೊಡಿ ಎಂತ ಬೋಧಿಸುವ ಜನರು ಬಂದರೆ ಯಾರೂ ಕಿವಿಕೊಡಬಾರದು. ಮೈಸೂರಿಗೋ, ಮದ್ರಾಸಿಗೋ ಸೇರಿಸುವ ವಿಷಯ ಆನಂತರ ಯೋಚಿಸಬಹುದು. ಆದರೆ ಈಗ ಪಾರ್ಲಿಮೆಂಟಿನ ಮುಂದೆ ಬರಲಿಕ್ಕಿರುವ ಬಿಲ್ಲಿನಲ್ಲಿ ಕೊಡಗಿನ ಸಂಪೂರ್ಣ ಪ್ರಜಾಜವಾಬ್ದಾರಿ ಸರಕಾರವನ್ನು ಸ್ಥಾಪಿಸುವ ಶರತ್ತು ಇಡಲೇ ಬೇಕೆಂತ ಸರ್ವರೂ ಕೇಳಬೇಕಾಗಿದೆ. ಆದ್ದರಿಂದ ಮಡಿಕೇರಿ ಎಂಟುಗಿನ ತೀರ್ಮಾನವನ್ನು ವಿರೋಧಿಸಬೇಕೆಂತ ಯಾರಾದರೂ ಹೇಳಿದರೆ ಕೊಡಗಿಗೆ ಕೂಡಲೇ ಸಂಪೂರ್ಣ ಪ್ರಜಾಜವಾಬ್ದಾರಿ ಸರಕಾರವನ್ನು ಕೊಡಬೇಕೆಂಬದಕ್ಕೆ ನಿಮ್ಮ ಒಪ್ಪಿಗೆಕೊಡಿ ಎಂತ ಜವಾಬು ಕೊಡಲು ಯಾರೂ ಮರೆಯಬಾರದು.

ಕೆಲವು ಸಾಹಿತ್ಯದ ಸಮಸ್ಯೆಗಳು.

ಮಡಿಕೇರಿಯಲ್ಲಿ ನಡೆದ ೧೦ನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀಮಾನ್ ಡಿ. ವಿ. ಗುಂಡಪ್ಪನವರು ಮಾಡಿದ ಅಧ್ಯಕ್ಷೋಪನ್ಯಾಸದ ಮುಖ್ಯ ಮುಖ್ಯ ಭಾಗಗಳು.

ಕನ್ನಡ ಬದುಕಬೇಕಾದುದು.

ಕನ್ನಡ ಜನದ ಪುರಾತನತೆಯನ್ನೂ ಕಾರ್ಯದಕ್ಷತೆಯನ್ನೂ ಕಲಾ ಕುಶಲತೆಯನ್ನೂ, ಕನ್ನಡ ಸಾಹಿತ್ಯದ ವಿಸ್ತಾರವನ್ನೂ ವಿವಿಧತೆಯನ್ನೂ ಹಿಂದಿನ ಅಧ್ಯಕ್ಷೋಪನ್ಯಾಸಗಳು ವರ್ಣಿಸಿವೆ ಕರ್ನಾಟಕಕ್ಕೊಂದು ಚರಿತ್ರೆ ಇದೆ. ಅದರಲ್ಲಿ ರಾಜ್ಯ ಸ್ಥಾಪಕರು, ರಾಜ್ಯ ನಿರ್ವಾಹಕರು, ಶೂರರು, ಸಾಹಸಿಗಳು, ತತ್ವಜ್ಞಾನಿಗಳು, ಶಾಸ್ತ್ರನೇತ್ಯರು, ಸಮಾಜ ಸಂಸ್ಕರ್ತರು, ವಾಸ್ತು ಕಟಕ ಶಿಲ್ಪಿಗಳು, ಶಕ್ತಿಕರು, ಚಿತ್ರಕಾರರು, ಗಾಯಕರು, ಕವಿಗಳು—ಎಲ್ಲರೂ ಸೇರಿ, ಆ ಚರಿತ್ರೆಯನ್ನು ಭರತಖಂಡದ ಚರಿತ್ರೆಯಲ್ಲಿ ಒಂದು ಉಜ್ವಲ ಪ್ರಕರಣವೆನ್ನಿಸಿದ್ದಾರೆ. ನಮ್ಮ ಸಾಹಿತ್ಯದ ಠಾವೇರಿಯು ಸಾವಿರ ವರ್ಷಗಳ ಹಿಂದಣಿಂದ ಅವಿಚ್ಛಿನ್ನವಾಗಿ ತೆರೆದೆಯಾಗಿ ಪ್ರವಹಿಸುತ್ತಾ ಬಂದಿರುವುದು ಈಗ ನಮ್ಮ ಕಣ್ಣಿಗೆ ಕಾಣಿಸುತ್ತಿದೆ. ಈ ಪ್ರವಾಹಕ್ಕೆ ನಾನಾ ದಿಕ್ಕುಗಳಿಂದಲೂ ಹೊಳೆ ತೊರೆಗಳು ಕಾಣಿಕೆಯನ್ನು ತಂದು ಸಲ್ಲಿಸಿವೆ. ಶ್ರೀಮಾನ್ ನರಸಿಂಹರವರ ವಿದ್ವತ್ಪರಿಶ್ರಮದಿಂದ ನನಗೆ ಪರಿಚಿತರಾಗಿರುವ ಸುಮಾರು ೧೫೦೦ ಮಂದಿ ಕನ್ನಡ ಗ್ರಂಥ ಕರ್ತರಲ್ಲಿ ಈ ನಾಡಿನ ಎಲ್ಲಾ ಮತಗಳವರೂ, ಎಲ್ಲ ಕುಲಗಳವರೂ ಎಲ್ಲ ತರಗತಿಗಳವರೂ ಪ್ರಾತಿನಿಧ್ಯವನ್ನು ಪಡೆದಿದ್ದಾರೆ. ಸೋದರಿಗಳು ದಂಡ ನಾಯಕರು, ಪಂಡಿತರು, ಕೈ ಕಸಬಿನವರು, ಏರಕ್ಕರು, ಹೆಂಗಸರು—ಎಲ್ಲರೂ ಆಯಾಯ ಕಾಲಕ್ಕೆ ತಕ್ಕಂತೆ, ಅವರ ಸುತ್ತಮುತ್ತಲಿನ ಸ್ಥಿತಿಗೆ ಬೇಕಾದಂತೆ ತನ್ಮಲ್ಲಿದ್ದ ಅರಿವನ್ನೂ ಆನಂದವನ್ನೂ ಇತರರಿಗೆ ಕೊಡಲು ದುಡಿದಿದ್ದಾರೆ.

ಈ ಸಾಹಿತ್ಯ ಧಾರೆಯ ಅಮೃತಿಯನ್ನೂ ನಿರಂತರತೆಯನ್ನೂ ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದುದು ನಮ್ಮ ಭಾಷೆಯ ಸಜೀವತ್ವವನ್ನು ಮಂದಿಟ್ಟು ಮಾಡಿಕೊಳ್ಳುವುದಕ್ಕಾಗಿ ಯಾವ ಭಾಷೆಯ ಗ್ರಂಥರಾಶಿ ಇಷ್ಟು ವಿಪುಲವಾಗಿರುವುದೋ ಅದು ಸಾಯಬೇಕಾದುದಲ್ಲ. ಯಾವ ಜನದ ಜ್ಞಾನಿಗಳೂ, ವಿದ್ವಾಂಸರೂ, ವೀರ್ಯವಂತರೂ, ಸ್ಫೂರ್ತಿಭಾವಂತರೂ ಚಾಣಕ್ಕೆ ನಲ್ಮೆಗಳನ್ನು ಬಿಕ್ಕಿಸಲು ಈ ಬಗೆಯಾಗಿ ಎಡೆಬಿಡದೆ ಪ್ರಯತ್ನಿಸಲ್ಪಟ್ಟಿರುವರೋ ಅವರ ನುಡಿ ಸಾಯುತಕ್ಕುದಲ್ಲ. ಈ ಸಂಗತಿಯನ್ನು ಕನ್ನಡಿಗರೂ, ಅವರ ಪಕ್ಷದವರೂ, ಅವರ ಪ್ರತಿ ಪಕ್ಷದವರೂ ಕೂಡ ನೆನಪಿನಲ್ಲಿಡುವುದು ಅವಶ್ಯಕ.

ಸಂಸ್ಕೃತವು ಹೊರೆಯಾಗಬಾರದು.

ಕೆಲಮಂದಿ ಮಹನೀಯರು ಕನ್ನಡಕ್ಕೂ ಸಂಸ್ಕೃತಕ್ಕೂ ಪೋಟಾ ಪೋಟಿ ಕಟ್ಟಿಸಿ, ಕನ್ನಡದ ಕಡೆಯವರು ಸಂಸ್ಕೃತಿ ವಿರೋಧಿಗಳೆಂದೂ ತಾವೇ ಸಂಸ್ಕೃತ ಸಂರಕ್ಷಕರೆಂದೂ ಭ್ರಾಂತಿಯನ್ನುಂಟುಮಾಡಲು ಪ್ರಯತ್ನಿಸುತ್ತಿರುವುದನ್ನು ನನ್ನಂತೆಯೇ ತಕ್ಕವೂ ಆಶ್ಚರ್ಯ ವಿಷಾದಗಳೊಡನೆ ನೋಡುತ್ತಿರಬಹುದು. ಅಂಥವರಿಗೆ ಪ್ರತ್ಯುತ್ತರವಾಗಿ ಒಂದು ಮಾತು ಹೇಳಬೇಕಾಗಿದೆ. ಸಂಸ್ಕೃತವು ಪ್ರಾಚೀನತಮವೂ ಪೂಜ್ಯತಮವೂ ಆದ ಭಾಷೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಅದರ ಉಪಕಾರವು ನಮಗೆ ಇನ್ನು ಎಷ್ಟೆಂದೆಯೂ ಬೇಕಾಗಿದೆ. ಆದರೆ ಆ ಭಾಷೆಯ ಬೆಲೆಗೂ ಒಂದು ಮಿತಿಯುಂಟೆಂಬುದನ್ನು ಮಾತ್ರ ಮರೆಯಲಾಗದು ಅದು ಕೃತಕೃತ್ಯತೆಯನ್ನು ಪಡೆದಿರುವ ಭಾಷೆ.

ಸಂಸ್ಕೃತದಲ್ಲಿ ಕಾವ್ಯಶಾಸ್ತ್ರ ರಚನೆ ನಿಂತು ಹೋದಾಗ ನಮ್ಮ ಮನೋಬುದ್ಧಿಗಳ ಬೆಳವಣಿಗೆಯೇ ನಿಂತು ಹೋಗಲಿಲ್ಲ. ಪ್ರಪಂಚವೆಲ್ಲಾ ದೊಡ್ಡದಾಗುತ್ತಿದೆ; ನಮ್ಮ ಅಲೋಚನೆಗಳೂ ಅಭಿಲಾಷೆಗಳೂ ಹಬ್ಬುತ್ತಿವೆ. ಇವುಗಳಿಗೆ ಒದಗುವ ಭಾಷೆಯಲ್ಲವೇ ನಮಗೀಗ ಬೇಕಾದುದು?

ಸಂಸ್ಕೃತವು ವಾಙ್ಮಯಶಾಸ್ತ್ರಾಶ್ರಯವನ್ನು ಹೊಕ್ಕಂದಿನಿಂದ ಉಳಿದಿರುವ ಕೆಲಸವನ್ನು ಕನ್ನಡವೀಗ ನಡಸಬೇಕಾಗಿದೆ. ತಂದೆ ತಾಯಿಗಳೂ, ವೃದ್ಧರೂ, ಏರಕ್ಕರೂ ಆದ ಒಳಿಕ ಅವರ ಜೀವನದ ಮೂಲಕ ನಡೆಯುವಂತೆ, ಸಂಸ್ಕೃತದ ಇನ್ನು ಮೇಲಣ ಜೀವನವು ಕನ್ನಡದ ಮೂಲಕ ನಡೆಯಬೇಕಾಗಿದೆ; ಎಂದರೆ ಸಂಸ್ಕೃತದ ಪ್ರಯೋಜನವು ಜನ ಸಾಮಾನ್ಯಕ್ಕೆ ಕನ್ನಡದ ಮೂಲಕ ದೊರೆಯಬೇಕಾಗಿದೆ.

ಸಂಸ್ಕೃತವು ಮೂಲ ವಿಗ್ರಹದಂತೆ ಗುಡಿಯೊಳಗೆ ಉಳಿತ್ತಿದ್ದಾಗ ಕನ್ನಡವು ಉತ್ಸವ ವಿಗ್ರಹದಂತೆ ಹೊರಕ್ಕೆ ಬಂದು ಜನರಿಗೆ ದಿವ್ಯ ದರ್ಶನವನ್ನು ದೊರಕಿಸಿದೆ ಲೋಕೋಪಕಾರದ ವಿಸ್ತೀರ್ಣವನ್ನು ಅಳೆದು ನೋಡಿದರೆ, ಬಸವಣ್ಣ ಅಲ್ಲಮರಿಂಗಳಿಂದಲೂ ಪುರಂದರ ಕನಕರುಗಳಿಂದಲೂ ಆಗಿರುವಷ್ಟು ವೇದಾಂತ ತತ್ವ ಪ್ರಚಾರವು ಅನೇಕ ಉಪನಿಷದ್ವಿಖ್ಯಾತರುಗಳಿಂದ ಆಗಿಲ್ಲವೆಂದು ಧಾರಾಳವಾಗಿ ಹೇಳಬಹುದು; ಕುಮಾರವ್ಯಾಸ ಕುಮಾರ ವಾಲ್ಮೀಕಿಗಳಿಂದ ಆಗಿರುವಷ್ಟು ಭಾರತ ರಾಮಾಯಣ ಕಥಾ ಪ್ರಸಾರವು ಸಂಸ್ಕೃತದಲ್ಲಿ ವ್ಯಾಖ್ಯಾನ ಬರೆದ ನೀಲಕಂಠ ಗೋವಿಂದ ರಾಜರುಗಳಿಂದ ಆಗಿಲ್ಲವೆಂದು ಹೇಳಬಹುದು ಹೀಗೆ ಸಂಸ್ಕೃತದ ಸಂತತಿ ವ್ಯಾಖ್ಯಗಳು ಕನ್ನಡದ ಮೂಲಕ ಅಭಿವೃದ್ಧಿಯಾಗುತ್ತಿವೆ. ಹೀಗಿರುವಾಗ ಕನ್ನಡವು ಸಂಸ್ಕೃತಕ್ಕೆ ವೈರಿಯೆಂದು ಹೇಳಬಹುದೆ? ಹಿಂದೆ ಸಂಸ್ಕೃತದಿಂದ ಕನ್ನಡ ಬದುಕಿತು; ಮುಂದಕ್ಕೆ ಕನ್ನಡದಲ್ಲಿ ಸಂಸ್ಕೃತ ಬದುಕಬೇಕು.

ಅನಿವಾರ್ಯತೆ, ಔಚಿತ್ಯ ಆಥವಾ ಹೆಚ್ಚಿಂದಿಕೆ—ಈ ಎರಡು ತತ್ವಗಳನ್ನು ಮರೆಯದೆ ಎಲ್ಲಿಂದ ಪದ ಸಂಗ್ರಹ ಮಾಡುವುದಕ್ಕೂ ಹಿಂಜರಿಯುಬೇಕಾಗಿಲ್ಲ. ನಮ್ಮ ಪ್ರತ್ಯಯದ ಮುದ್ರೆಯನ್ನೊತ್ತಿದ ಮೇಲೆ—ನಮ್ಮ ತದ್ಭವದ ಸಾಕಲಿಕೆಯನ್ನು ಮಾಡಿಸಿದ ಮೇಲೆ ಎಲ್ಲಿಂದ ಬಂದ ಪದವಾದರೂ ಅದು ನಮ್ಮದೇ. ಪ್ರಕೃತಿ-ವಿಜ್ಞಾನ ಸಮಾಜ-ವಿಜ್ಞಾನ ಶಾಸ್ತ್ರಗಳನ್ನು ಬರೆಯುವಾಗ ಇಂಗ್ಲಿಷ್, ಜರ್ಮನ್, ಲ್ಯಾಟಿನ್ ಭಾಷೆಗಳ ಮಾತುಗಳನ್ನು—ಸಮಾಸ ಪದಗಳನ್ನು—ಉಂಡುಂಡೆಯಾಗಿ ಅ ನಾಮತತ್ವಕ್ಕಿ ತೆಗೆದುಕೊಳ್ಳಬೇಕಾದೀತು. ಅದಕ್ಕೆ ಸಂಕೋಚಪಡಬೇಕಾದುದಿಲ್ಲ. ಇಂಗ್ಲಿಷಿನವರು ಹಾಗೆ ಮಾಡಿದ್ದಾರೆ. ಅವಶ್ಯಕತೆ ಔಚಿತ್ಯಗಳಿಗೆ ತಕ್ಕಂತೆ ಶಬ್ದಗಳನ್ನಾಯ್ದು ಜೋಡಿಸಿಕೊಳ್ಳುವ ಸ್ವಾತಂತ್ರ್ಯದಲ್ಲಿ ಕುಮಾರವ್ಯಾಸ ಮಹಾ ಕವಿ ನಮಗೆ ಗುರುವಾಗಿದ್ದಾನೆ. ನಮಗೆ ಸಂಸ್ಕೃತವೂ ಬೇಕು, ಇಂಗ್ಲಿಷೂ ಬೇಕು, ಹಿಂದೀ ಮರಾಠೀ ಬಂಗಾಳೀಗಳೂ ಬೇಕು: ಇವುಗಳ ಉಪಜಾತಿ ಶಾಖಾಜಾತಿಗಳು ಸಹ ಬೇಕು ಆದರೆ ನಮ್ಮ ಮೇಲೆ ಕೈ ನಡಿಸುವುದಕ್ಕಲ್ಲ, ನಮ್ಮ ಬಲವನ್ನು ಹೆಚ್ಚಿಸುವುದಕ್ಕೆ.

ಈಗಿನ ಸಾಹಿತ್ಯ.

ಅನ್ಯ ಸಾಹಿತ್ಯ ಸಂಸರ್ಗದಿಂದ ಕನ್ನಡಕ್ಕೆ ಪ್ರಯೋಜನ ಉಂಟೆಂಬುದು ಈಗ ಎಲ್ಲರಿಗೂ ಪ್ರತ್ಯಕ್ಷವಾಗಿದೆ. ಕಳೆದ ಐವತ್ತು ವರ್ಷಗಳಲ್ಲಿ, ಕನ್ನಡ ಸಾಹಿತ್ಯವು ಒಂದು ನವೀನ ಕಾಂತಿಯನ್ನೂ ಶಕ್ತಿಯನ್ನೂ ಸಂಪಾದಿಸಿಕೊಳ್ಳುತ್ತ ಬಂದಿದೆ. ಅದರಲ್ಲಿಯೂ ಈಗ ೧೫—೨೦ ವರ್ಷಗಳಲ್ಲಿ—ಕರ್ನಾಟಕ ಸಾಹಿತ್ಯ ಪರಿಷತ್ತು, ಧಾರವಾಡ ವಿದ್ಯಾವರ್ಧಕ ಸಂಘ, ಬೆಂಗಳೂರಿನ ಕರ್ನಾಟಕ ಸಂಘ, ಧಾರವಾಡದ ಗೆಳೆಯರ ಗುಂಪು ಮಂಗಳೂರಿನ ಬಾಲ ಸಾಹಿತ್ಯ ಮಂಡಲ, ಮೈಸೂರು ಕರ್ನಾಟಕ ಸಂಘ ಮೊದಲಾದ ಸಂಸ್ಥೆಗಳ ಸ್ಥಾಪನೆಯಾದ ಮೇಲೆ—ಈ ಸಂಸ್ಥೆಗಳ ಮೂಲಕವೂ, ಅವುಗಳ ಪ್ರಭಾವದಿಂದುಂಟಾದ ವಾತಾವರಣದ ಪ್ರೇರಣೆಯಿಂದಲೂ ಹೊಸ ಜಾತಿಯ ಗ್ರಂಥ ರಾಶಿಯು ದೇಶದ ಗಮನವನ್ನಾಕರ್ಷಿಸಿಕೊಳ್ಳುವಷ್ಟರ ಮಟ್ಟಿಗೆ ಬೆಳೆದಿದೆ. ಈ ಗ್ರಂಥಗಳಲ್ಲಿ ಕೆಲವುಗಳ ವಿಷಯ ಹೊಸದು ಕೆಲವುಗಳ ರೀತಿ ಹೊಸದು.

ಕಾವ್ಯ ವಿಚಾರ.

ಕಾವ್ಯದ "ಪ್ರಯೋಜನ" ಮೊತ್ತ, ಅದರ ಪ್ರಮಾಣ ಯುಕ್ತ ತೆಯ ಲಕ್ಷಣವೇ ರಸ ಇದೇ ಕಾವ್ಯದ ಸತ್ಯ.

—ಮೊನಚಿನ ಸ್ವಭಾವ ಪ್ರಕಾಶಕವಾಗಿ ಸ್ವಾನುಭವೈಕಸಿದ್ಧವಾಗಿರುವ ಸತ್ಯವೇ ಕಾವ್ಯ ಕಾವೇರಿಗೆ ಬ್ರಹ್ಮಗಿರಿ.

ಕಾವ್ಯೋಪಾಸನೆಯು ಉತ್ತಮ ಆತ್ಮಸಂಸ್ಕಾರವೆಂದು ನಾನು ನಂಬಿಕೊಂಡಿದ್ದೇನೆ. ನಮ್ಮ ದೌರ್ಬಲ್ಯಗಳ ಸೀಮೆಯನ್ನೂ, ನಮ್ಮ ಸತ್ಕೃತ್ಯಾತ್ಸಾಹದ ಆಳವನ್ನೂ, ನಮ್ಮ ಮನೋರಥಗಳ ಪರಿಪೂರ್ಣ ದಶೆಯನ್ನೂ ಕವಿಯು ವ್ಯಾಜ ಪ್ರಕಾರದಿಂದ ತೋರಿಸಿಕೊಡುತ್ತಾನೆ. ಅವನ ಲೋಕದ ದೇವನದಿಯು ನಮ್ಮ ಸ್ವಭಾವವನ್ನು ತೊಳೆದು ಚಾಲಿಸುತ್ತದೆ; ಅಲ್ಲಿಯ ಸೂರ್ಯ ಕಿರಣವು ನಮ್ಮೊಡೆಯ ವೈರಾಗ್ಯವನ್ನು ಅರಳಿಸಿ ಸೌರಭವನ್ನು ಹರಡಿಸುತ್ತದೆ ಅಲ್ಲಿಯ ಗಾಳಿಯು ಸೋಂಕು ನಮ್ಮ ಅಂತರಂಗದ ಮೂಳೆಗಳನ್ನು ಉಕ್ಕಿನ ಕಂಬಗಳನ್ನಾಗಿ ಮಾಡುತ್ತದೆ. ಆದರೆ ಈ ಇಂದ್ರಜಾಲವನ್ನು ಮಾಡಬೇಕೆಂಬುದು ಅವನ ಉದ್ದೇಶವಾಗಿರಬೇಕಾದುದಿಲ್ಲ. ಇದೇ ಕವಿ ಕರ್ಮದಲ್ಲಿರುವ ವಿಚಿತ್ರ. ದುಂಬಿ ಹಿನ್ನು ರೇಗಿಸಬೇಕೆಂದಲ್ಲ ಮಾಧೂಕವು ಬಿರಿಯುವುದು; ವಿಕಸಿಸುವುದನ್ನು ನೋಯಿಸಬೇಕೆಂದಲ್ಲ ಕೋಗಿಲೆ ಬಾಯಿಬ್ಬಿಡುವುದು. ಸಾಮಾನ್ಯದ ಹಾಡನ್ನು ಹಾಡುತ್ತಿರುವುದು ಕವಿಗೆ ಸಹಜ ಧರ್ಮ; ಅದನ್ನು ಕೇಳಿದವನ ಅಂತರಂಗದ ಕಲ್ಲು ಬೆಣ್ಣೆಯಾಗುವುದೂ ಮಣ್ಣು ವಜ್ರವಾಗುವುದೂ ಮಾನವ ಕುಲಕ್ಕೆ ಸಹಜ ಧರ್ಮ.

ಕಾವ್ಯದ ಕನ್ನಡಿಯಲ್ಲಿ ನಮ್ಮ ಅಂತರಮಯುತಗಳ ಬಗೆಯನ್ನು ನಾವು ನೋಡಿಕೊಳ್ಳುತ್ತೇವೆ; ಮುಮ್ಮೈಯ ಬಿಡಗನ್ನು ಇತರ ಬಗೆಗಳಲ್ಲಿ ತಿಳಿಯಲಾದೀತು: ಆದರೆ ಹಣೆಯ ತಿಲಕವನ್ನಾಗಲಿ ಬೆನ್ನಿನ ಗಂಟಿಯನ್ನಾಗಲಿ ಕಾಣಲು ಕನ್ನಡಿಗೇ ಹೋಗಬೇಕು. "ಕಾವ್ಯ ಮುಕುರ" ಬಿಂಬದಲ್ಲಿ ಈ "ನಮ್ಮ" ತನವು—ಈ ಆತ್ಮಬಾಂಧವ್ಯವು—ಇರುವುದರಿಂದಲೇ ಅದು ನಮಗೆ ಪ್ರಿಯವಾಗುತ್ತದೆ. ಮನೋರಾಜ್ಯದಲ್ಲಿ ರಾಗ, ಭಾವ, ಸಂಶಯ, ಭಯ, ಹಟ, ತಳ್ಮಳ—ಈ ನಾನಾ ಪ್ರಜೆಗಳು ಹೇಗೆ ಹೇಗೆ ಚಳವಳಿ ನಡೆಸಬಹುದೋ, ಆತ್ಮರಾಜನು ಅವುಗಳನ್ನು ಹೇಗೆ ಆಳಬಹುದೋ ಅದನ್ನು ಕವಿಯು ಚಿತ್ರಿಸಿರುತ್ತಾನೆ. ರಾಮನ ಅಸಂಶಯ ಸ್ನೇಹ, ಲಕ್ಷ್ಮಣನ ಅವ್ಯಾಜ ಪ್ರೀತಿ, ಧರ್ಮರಾಯನ ಅಜಾತಶತ್ರುತೆ, ನಳನ ವಿರಹ ವ್ಯಥೆ, ಕರ್ಣನ ಹುಚ್ಚು ಔದಾರ್ಯ, ಅಶ್ವತ್ಥಾಮನ ಹುಚ್ಚು ಶೌರ್ಯ, ಉತ್ತರನ ಕ್ಷಣಿಕ ಪ್ರತಾಪ, ದುರ್ಯೋಧನನ ಕರ್ಣ ಪ್ರಶಾಪ, ರಾವಣನ ನಿಶ್ಚಲ ಧೈರ್ಯ, ಭೀಷ್ಮನ ಸ್ವಾಮಿನಿಷ್ಠೆ, ವಿಭೀಷಣನ "ದಂಗೆ," ಸುರುಚಿಯ ಈರ್ಷ್ಯೆ, ಸತ್ಯಭಾಮೆಯ ಸತ್ಯಾಗ್ರಹ—ಈ ನಾನಾ ಉದ್ವೇಗಗಳೂ ವಿಲಾಸಗಳೂ ವೀರ ವ್ರತಗಳೂ ಯಾವ ಮನಸ್ಸಿನಲ್ಲಿ ತಾನೆ ಪ್ರತಿಧ್ವನಿಗಳನ್ನು ಹುಟ್ಟಿಸುವುದಿಲ್ಲ? ಕಾವ್ಯಭಾವಿಯಲ್ಲಿ ಜೀವನು ಹೃದಯ ಲೀಲೆ, ಆತ್ಮಶಿಕ್ಷೆ—ಇವೆರಡರ ನಡುವೆ ಬಿದ್ದು ಹೊಯ್ದಾಡುತ್ತಿರುತ್ತಾನೆ. ಅದರ ಸುದರ್ಶನವು ಆತ್ಮಸಂಸ್ಕಾರವಲ್ಲದಿದ್ದರೆ ಆ ಸಂಸ್ಕಾರವು ಇನ್ನೆಲ್ಲಿ ದೊರೆತೀತು?

ಕವಿಯನ್ನೊಲಿಸಿಕೊಳ್ಳುವ ಉಪಾಯಗಳಲ್ಲಿ ಮೊದಲನೆಯದು ಅಕ್ಷರ ಗುಣವನ್ನು—ಎರಡನೆಯದು ಛಂದಸ್ಸಿನದು. ಮೂರನೆಯದು ಸಂಗೀತದ್ದು. ಅಕ್ಷರಗುಣದಲ್ಲಿ ವಾಸ್ತವಭಾಗವೂ ಛಂದಸ್ಸು ಸಂಗೀತಗಳೆರಡೂ ವಿಶೇಷವಾಗಿ ಪದ್ಯ ಕಾವ್ಯಗಳಿಗೆ ಸೇರತಕ್ಕುವೆಂಬುದು ಸ್ಪಷ್ಟವಾಗಿದೆ. ಆದರೆ ಛಂದಸ್ಸಿಗೆ ಆಧಾರಭೂತವಾದ ಧಾಟಿಯೆಂಬ ಒಂದು ಹಸ್ತ ದೀರ್ಘಾನುಕ್ರಮವು ಒಳ್ಳೆಯ ಗದ್ಯದಲ್ಲಿಯೂ ಕಾಣಬರುತ್ತದೆ. ಜಾಗರೂಕತೆಯಿಂದ ಕಟ್ಟಿದ ವಾಕ್ಯಗಳು ಒಂದು ಪದ ವೈವಿಧ್ಯ ಒಂದು ತರಂಗ ಗತಿ, ಒಂದು ಲಯ ಭಂಗಿ—ಇವುಗಳಿಂದ ಸುಂದರವಾಗಿರುತ್ತವೆ, ಇದನ್ನು ನಮ್ಮ ಚಂಪೂ ಗದ್ಯದಲ್ಲಿ ಕಾಣಬಹುದು.

ಕಳೆದ ಮೂರು ನಾಲ್ಕು ವರ್ಷಗಳಲ್ಲಿ ಪ್ರಕಟವಾಗಿರುವ ಕನ್ನಡ ಕಾವ್ಯಗಳು ಛಂದಸ್ಸನ್ನು ಬಿಟ್ಟಿವೆಯೆಂದು ಕೆಲವರು ತಿಳಿದುಕೊಂಡಿರುವಂತಿದೆ. ಪರೀಕ್ಷಿಸಿ ನೋಡಿದರೆ ಅವುಗಳಲ್ಲಿ ಒಂದು ಛಂದೋವಿಧಾನವು ಕಾಣಬರುತ್ತದೆ. ಬಹುಮಟ್ಟಿಗೆ ಅದು ಹೊಸದು ಕೂಡ ಅಲ್ಲ. ನಮ್ಮ ಹಳೆಯ ಚೌಪದಿ, ರಗಳೆ, ಗೋವಿನ ಕಥೆಯ ಮಟ್ಟು, ಸಾಂಗತ್ಯ, ತ್ರಿಪದಿ—ಈ ಜಾತಿಗಳಲ್ಲಿಯೇ ಸಾಮಾನ್ಯವಾಗಿ ನಮ್ಮ ಹೊಸ ಪದ್ಯಗಳ ಪಾದಗಳು ಸೇರತಕ್ಕುವಾಗಿವೆ. ಕಣ್ಣಿನ ಅನುಕೂಲಕ್ಕಾಗಿ ಆ ಪಂಕ್ತಿಗಳನ್ನು ಹೊಸ ರೀತಿಗಳಲ್ಲಿ ವಿಂಗಡಿಸಿ ಜೋಡಿಸಿ ಅಚ್ಚು ಹಾಕಿರಬಹುದು. ಆದರೆ ಅವುಗಳನ್ನು ಧಾಟಿಯಿಂದ ಓದಿ ನೋಡಿದರೆ ಅವು ಹೊಸದಲ್ಲವೆಂಬುದು ಗೊತ್ತಾಗತ್ತದೆ. ಒಂದು ವೇಳೆ ಅವು ಹೊಸದಾಗಿದ್ದರೆ ಅದರಲ್ಲಿ ತಪ್ಪೇನು?

ಪೂರ್ವ ಕವಿಗಳು ವ್ಯಾಸಕ್ಕೆ ದಾಸರಾಗಿ ಭಾವಕ್ಕೆ ಸಾವು ತಂದರು ಎಂದು ಹೇಳುವುದುಂಟು. ಈ ವಾಕ್ಯವೇನೋ ವ್ಯಾಸಬದ್ಧವಾಗಿದೆ; ಆದರೆ ಅದರಲ್ಲಿರುವುದು ಪೂರ್ಣ ಸತ್ಯವಲ್ಲ. ಪಂಪನೂ ರನ್ನನೂ ಕುಮಾರವ್ಯಾಸನೂ ಕನಕನೂ ವ್ಯಾಸವಿಟ್ಟವರಲ್ಲ; ಅವರದು ರಸವತ್ಕಾವ್ಯಗಳಲ್ಲವೆಂದಲ್ಲ, ಅಂಥಾ ಕಾವ್ಯದ ಸ್ವರೂಪವು ನನಗಿನ್ನೂ ತಿಳಿದಿಲ್ಲವೆಂದೇ ಹೇಳಬೇಕಾಗುತ್ತದೆ. ಕಾವ್ಯವು ರಸಪ್ರಧಾನವಾಗಿರಬೇಕೆಂಬುದಂತೂ ಖಂಡಿತ. ಆ ರಸಾವಿರ್ಭಾವಕ್ಕೆ ವ್ಯಾಸವು ಎಷ್ಟೋ ಸಂದರ್ಭಗಳಲ್ಲಿ ಅನುಕೂಲವಾಗುತ್ತದೆ; ಇನ್ನೆಷ್ಟರಲ್ಲಿಯೋ ಪ್ರತಿಕೂಲವಾಗುತ್ತದೆ. ಆದುದರಿಂದ ವ್ಯಾಸವು ಹೀಗೆಯೇ ಸರಿ ಎಂದು ಶಾಸನಮಾಡುವುದು ಸಾಧ್ಯವಿಲ್ಲ.

ಆದರೆ ನಮ್ಮ ನೂತನ ಕವಿಗಳಲ್ಲಿ ಎಲ್ಲರೂ ವ್ಯಾಸವನ್ನು ಬಿಟ್ಟವರಲ್ಲ. ಅವರು ದ್ವಿತೀಯಾಕ್ಷರ ವ್ಯಾಸವನ್ನು ಬಿಟ್ಟಿದ್ದರೂ ಪಾದಾಂತ್ಯದಲ್ಲಿಯೋ, ಪಾದಮಧ್ಯದಲ್ಲಿಯೋ, ಒಂದು ಬಿಟ್ಟು ಮತ್ತೊಂದು ಪಾದದಲ್ಲಿಯೋ ವ್ಯಾಸವನ್ನಿಟ್ಟಿರುವರು. ಇದು ಎಷ್ಟು ಮಟ್ಟಿಗೆ ಜನರಂಜಕವಾಗುವುದೋ ನಿಶ್ಚಯಿಸಲು ಇನ್ನೂ ಸ್ವಲ್ಪ ಕಾಲ ಬೇಕಾಗಬಹುದು.

ಹಿಂದಿನ ರೀತಿಯು ಪದ್ಯರಚನೆ ನಿಂತು ಹೋದಂತಿದೆಯೆಲ್ಲಾ ಎಂಬುದು ನನಗಿರುವ ಕಳವಳ. ನಾನು ಬೇಡುವುದು ಇನ್ನೊಂದು "ಜಗನ್ನಾಥವಿಜಯ" ವನ್ನಲ್ಲ, ಇನ್ನೊಂದು "ಗದಾಯುದ್ಧ" ವನ್ನ. ಹಳೆಯ ಜಾತಿಯ ಪದ್ಯಗಳನ್ನು ಬರೆಯುವುದು ಪ್ರಯಾಸವಿರಬಹುದು; ಆದರೆ ಅದರಲ್ಲಿ ಒಂದು ಹಿಡಿತ, ಒಂದು ಗುಂಫನ, ಒಂದು ಆಕ್ರಮಣ ಶಕ್ತಿ ಇರುತ್ತದೆ. ಹೊಸ ಜಾತಿಯ ಪದ್ಯರಚನೆ ಸುಲಭವಿರಬಹುದು; ಇದರಲ್ಲಿ ಸ್ವಾತಂತ್ರ್ಯ ಹೆಚ್ಚಿರಬಹುದು ಆದರೆ ಈ ಪದ್ಯಗಳೊಳಕ್ಕೆ ಕಾವ್ಯೋಪಯುಕ್ತ ವಿಷಯಗಳು ನುಣುಚಿಕೊಳ್ಳುವುದೂ, ಜಳ್ಳು ವಚನದ ತುಂಡುಗಳು ದೂರಿಕೊಳ್ಳುವುದೂ ಕೂಡ ಸುಲಭವೆಂದು ತೋರುತ್ತದೆ. ಈ ದೋಷಗಳನ್ನು ದೂರವಿಡುವುದಕ್ಕಾಗಿ ಹೊಸ ಜಾತಿಯ ಕವಿಗಳು ತಿಳಿದುಕೊಳ್ಳಬೇಕಾಗಿರುವ ಎಚ್ಚರಿಕೆಯು ಪೂರ್ವಕರು ಪಡುತ್ತಿದ್ದ ಪ್ರಯತ್ನಕ್ಕಿಂತ ಕಡಿಮೆಯಾದುದಲ್ಲ. ಅಭ್ಯಾಸಕ್ಕಾಗಿಯಾದರೂ ವಿದ್ಯಾರ್ಥಿಗಳು ಆಗಾಗ ಕಂದವೃತ್ತಗಳ ರಚನೆಗೆ ಪ್ರಯತ್ನಪಟ್ಟರೆ ಅವರಿಗೆ ಪ್ರಯೋಜನವುಂಟೆಂದು ನಾನು ತಿಳಿದುಕೊಂಡಿದ್ದೇನೆ. ಅದರಿಂದ ಕೈ ಕುದುರುತ್ತದೆ.

ವಚನ ಗ್ರಂಥಗಳು.

ಈಗ ತಿಳುವು ಕೊಡುವ ತಿಳಿಯೂಢ ವಚನ ಗ್ರಂಥಗಳು ಅಮಿತವಾಗಿ ಬೇಕಾಗಿವೆ. ಒಳ್ಳೆಳ್ಳೆಯ ಸಣ್ಣ ಕಥೆಗಳು ಈಚೆಗೆ ಜೆಚ್ಚಾಗಿ ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ. ಇನ್ನು ದೊಡ್ಡವಾದ ದೊಡ್ಡ ಕಥೆಗಳನ್ನು ನಿರೀಕ್ಷಿಸಿಕೊಂಡಿರತಕ್ಕವರಲ್ಲಿ ನಾನೊಬ್ಬನು. ನಮ್ಮ ಸಮಾಜದ ಜೀವನದಲ್ಲಿ ದೊಡ್ಡ ಕಥೆಗೆ ಬೇಕಾದ ಸಾಮಗ್ರಿ ದೊರೆಯುವುದಿಲ್ಲವೇ? ದೊಡ್ಡ ಕಥೆಗೂ ಪ್ರತಿಭೆ ಬೇಕೆಂಬುದು ನಿಜ; ಅದಕ್ಕೆ ಬಹು ಕಾಲದ ವ್ಯವಸಾಯವೂ ವಿಕಾಗೃತಿಯೂ ಬೇಕು. ಆದರೆ ಎಲ್ಲ ದೊಡ್ಡ ಕೆಲಸವೂ ತಪಶ್ಚರ್ಯೆಯೇ ಅಲ್ಲವೇ

ಕಸಬು ಕೈಗಾರಿಕೆಗಳಲ್ಲಿಯೂ ಸಹಾಯವಾಗಿ ದೇಶದ ಸಂಪತ್ಸಾಧನ ಕಾರ್ಯಕ್ಕೆ ಅನುಕೂಲವಾಗುವವು.

ದೇಶ ವಿದೇಶಗಳ ಸಂಕ್ಷೇಪ ಚರಿತ್ರೆಗಳನ್ನು ಬರೆಯಲು ನಮ್ಮವರೇಕಕ್ಕೆ ಮೊದಲು ಮೂಡಬಾದು? ನಾನಾ ಜನಾಂಗಗಳು ಸ್ವಾತಂತ್ರ್ಯಕ್ಕಾಗಿ ಉಚ್ಚಾಶ್ರಯಕ್ಕಾಗಿ, ಸಮೂಜ ಸಂಸ್ಕಾರಕ್ಕಾಗಿ, ಭಾಷಾಭ್ಯುದಯಕ್ಕಾಗಿ ನಡೆಸಿದ ಹೋರಾಟಗಳೂ, ಪಟ್ಟ ಶ್ರಮಗಳೂ, ಹಿಡಿದ ಉಪಾಯಗಳೂ, ಸಾಧಿಸಿದ ಆಕಾಂಕ್ಷೆಗಳೂ ನಮ್ಮವರಿಗೆ ತಿಳಿಯಬೇಡವೆ. ಅಥವಾ ಸ್ವಾರಸ್ಯಪಡಲಾರವೆ? ಚರಿತ್ರೆಯು ಪ್ರತ್ಯಕ್ಷ ಕಾವ್ಯ. ಜಗಜ್ಜೀವಿತ ಪ್ರವಾಹದಲ್ಲಿ ಕಾಣಬಾರದ ಕಾವ್ಯ ವಸ್ತು ಮತ್ತೆಲ್ಲಿ ದೊರೆಯಲಾದೀತು? ಮನಸ್ಸಿನೊಳಗಿನ ಆವಿಯ ಕಾವ್ಯವು ಸಾರ್ಥಕವಾಗಿ ಬಾಳಬೇಕಾದರೆ ಅದನ್ನು ಬರೆಯುವವನಿಗೂ ಓದುವವರಿಗೂ ತಮ್ಮ ಹೊರಗಿನ ಜೀವನ ಸಮುದ್ರದ ಕಾವ್ಯವು ಚೆನ್ನಾಗಿ ತಿಳಿದಿರಬೇಕು—ಎಂದರೆ ಲೋಕಸಂಸ್ಥಿತಿಯ ಜ್ಞಾನವು ವಿಶದವಾಗಿರಬೇಕು. ಹೀಗೆ ಉತ್ತಮ ಸಾಹಿತ್ಯ ದೃಷ್ಟಿಯಿಂದಲೂ ಸಹ ಚರಿತ್ರೆಯು ಅವಶ್ಯವಾಗಿದೆ. ನಮ್ಮ ಜನರಲ್ಲಿ ಒಂದು ಹೊಸ ಹುರುಪೂ, ಹೊಸ ವಿಚಾರ ಬುದ್ಧಿಯೂ, ಹೊಸ ಸಂಸ್ಕಾರ ಶ್ರದ್ಧೆಯೂ ಹುಟ್ಟುವುದಕ್ಕಿಂತೂ ಚರಿತ್ರೆಯಿಂದಾಗಬಹುದಾದ ಉಪಕಾರವು ಅಷ್ಟಿಷ್ಟಲ್ಲ.

ಮಹಾಜನ ವಾಚನಾಭ್ಯಾಸ.

ಸಾಹಿತ್ಯಾಭಿವೃದ್ಧಿಯನ್ನು ಕುರಿತು ಮಾತನಾಡುವಾಗ ದೇಶದ ಮಹಾಜನರು ಅದಕ್ಕಾಗಿ ಹೇಗೆ ಸಹಕರಿಸಬಹುದೆಂಬುದನ್ನು ಸೂಚಿಸದೆ ತೀರದು. ಕನ್ನಡದಲ್ಲಿ ಕಾಲೋಚಿತವಾದ ಗ್ರಂಥರಾಜನೆ ಇಲ್ಲವೆಂದು ಹೇಳುವ ದಿವಸ ಹೋಗಿದೆ. ಗ್ರಂಥರಾಶಿಯು ದಿನೇ ದಿನೇ ಬೆಳೆಯುತ್ತಿದೆ. ಆದರೆ ಓದುವವರ ಸಂಖ್ಯೆ ಅದರಂತೆ ಬೆಳೆಯುತ್ತಿಲ್ಲ. ನಮ್ಮ ನೆರೆಹೊರೆಯ ತಮಿಳಿನಲ್ಲಿಯೂ, ತೆಲುಗಿನಲ್ಲಿಯೂ ಇರುವ ಮಟ್ಟಿಗೆ ವಾಚನಾಭ್ಯಾಸವು ನಮ್ಮಲ್ಲಿಲ್ಲ. ನಮ್ಮ ವಾಚಕರಲ್ಲಿ ತಾರತಮ್ಯ ವಿಮರ್ಶೆಯ ಅಭ್ಯಾಸವೂ ಇನ್ನೂ ಬೆಳೆಯಬೇಕೆಂದು ತೋರುತ್ತದೆ. ಓದುವವರಲ್ಲಿ ಕಾಲಯೊಪನೆಗೆಂದು ಪುಸ್ತಕ ಕೈಗೆ ತೆಗೆದುಕೊಳ್ಳುವವರೇ ಬಹು ಮಂದಿ. ನಮ್ಮ ಇಂಗ್ಲಿಷ್ ವಿದ್ಯಾವಂತರಂತೂ ಕನ್ನಡ ಪುಸ್ತಕಗಳು ಹೆಂಗಸರಿಗೆ ಮಾತ್ರವೇ ಎಂದು ತಿಳಿದುಕೊಂಡಿರುವಂತೆ ನಡೆಯುತ್ತಾರೆ. ಗಂಡಸರೂ,-ಇಂಗ್ಲಿಷ್ ಓಲ್ಲವರೂ ಸಹ—ಓದಿ ಲಾಭ ಪಡೆಯುವಂಥ ಪುಸ್ತಕಗಳು ಕನ್ನಡದಲ್ಲಿ ಹುಟ್ಟಿವೆ, ಇನ್ನೂ ಹುಟ್ಟುತ್ತವೆ. ಆದರೆ ಮಹಾಜನರು ಉದಾಸೀನರಾಗಿ ನಿಂತರೆ, ಅವು ಏಕೆ ಹುಟ್ಟಬೇಕು? ಟಿಕ್ಕೆಟ್‌ಬುಕ್ ಕವಿತೆಯ ಪ್ರಸಾದವನ್ನವಲಂಬಿಸಿದಲ್ಲದೆ ಪುಸ್ತಕಕ್ಕೆ ನಿಲುಕಡೆ ದೊರೆಯದ ಹಾಗಿದ್ದರೆ, ಅಂಥಾ ದೇಶದ ಸಾಹಿತ್ಯವು ದೂರ ಸಾಗದು. ವಾಚನಾಲಯಗಳಿಂದ ಪುಸ್ತಕಗಳನ್ನರವಲಾಗಿ ತೆಗೆದುಕೊಳ್ಳುವುದರಲ್ಲಿ—ಲೇಖಕನಿಗೆ ಪ್ರೋತ್ಸಾಹ ಕಡಿಮೆಯಾಗುವ ಮಾತಂತಿರಲಿ—ವಾಚಕನಿಗೆ ಪ್ರಯೋಜನ ಕಡಮೆ. ಒಳ್ಳೆಯ ಪುಸ್ತಕವು ಒಂದು ಸಲದ ಓದಿನಿಂದ ಸಿಪ್ಪೆಯಾಗಿ ಹೋಗತಕ್ಕದ್ದಲ್ಲ. ಪದೇ ಪದೇ ನೋಡುವುದರಿಂದಲೇ ಅದರ ಗುಣವನ್ನರಿಯಲಾಗುವುದು. ಇದಕ್ಕಾಗಿ ಅದು ನಮ್ಮ ಬಳಿಯಿಂಬೇಕು. ಕನ್ನಡ ನಾಡಿನಲ್ಲಿ ಪ್ರತಿಯೊಂದು ಮನೆಗೂ ದೀಪವು ಹೇಗೆಯೋ ಪುಸ್ತಕವೂ ಹಾಗೆಯೇ ಅವಶ್ಯವಸ್ತುವೆಂಬುದನ್ನು ನಮ್ಮವರು ಗ್ರಹಿಸಬೇಕಾಗಿದೆ.

ಜನದಂತೆ ಸಾಹಿತ್ಯ.

ಇದಕ್ಕಿಂತ ಬಲು ದೊಡ್ಡ ವಿಚಾರವೊಂದಿದೆ. ಸಾಹಿತ್ಯ ಗುಣವು ಮುಖ್ಯವಾಗಿ ಜನಜೀವನ ಗುಣದ ಪ್ರತಿಫಲ. ಲೇಖಕನಿಗೆ ಬೇಕಾಗಿರುವ ಕಾವೂ ಹುರುಪೂ ಮುಖ್ಯವಾಗಿ ಅವನ ಸುತ್ತ ಮುತ್ತಲಿನ ಸನ್ನಿವೇಶಗಳಿಂದ ದೊರೆಯಬೇಕು. ತನ್ನ ಲೇಖನಕ್ಕೆ ಜೀವಕೊಡುವ ಪ್ರವೃತ್ತಿಯನ್ನೂ ಪ್ರೇರಣೆಯನ್ನೂ ತನ್ನ ಸಮೂಜದಿಂದ ಅವನು ಸಂಪಾದಿಸಿಕೊಳ್ಳಬೇಕು. ಹೀಗಾಗಲು ಆ ಸಮೂಜವು ಉತ್ಕರ್ಷಕರಗಳಾದ ಪ್ರವೃತ್ತಿಗಳಿಂದಲೂ ಉಜ್ಜ್ವಲಗಳಾದ ಪ್ರೇರಣೆಗಳಿಂದಲೂ ಕೂಡಿದ್ದಾಗಿರಬೇಕು. ಜನದ ಮನೋಬುದ್ಧಿಗಳು ಒಂದು ವೇಗದಿಂದ, ಒಂದು ತೀವ್ರಗತಿಯಿಂದ, ಒಂದು ಪೌರುಷದಿಂದ ಒಂದು ಉತ್ಸಾಹದಿಂದ ಸಂಚರಿಸುತ್ತಿರಬೇಕು. ನೂತನ ಭಾವ ಸಂಘರ್ಷಣೆ, ನೂತನಾಭಿವ್ಯಾಯ ಸಂಘಟನೆ, ನೂತನ ಸಂದೇಹ ವಿಮರ್ಶನೆ, ನೂತನ ತತ್ತ್ವ ಪರಿಶೋಧನೆ—ಇವು ಲೇಖಕರಿಗೆ ಬೇಕಾದ ವಾತಾವರಣ. ಹೊಸ ಆಶೆಯ, ಹೊಸ ಉತ್ಸಾಹ, ಹೊಸ ವೀರ್ಯ—ಇವು ಇಲ್ಲದಿದ್ದರೆ ಜನತೆಯ ಜೀವನವೂ ಹೊಸದಾಗದು, ಅದರ ಸಾಹಿತ್ಯವೂ ಹೊಸದಾಗದು. ಜನಪದ್ದಂತೆ ಸಾಹಿತ್ಯ. ಆದ ಕಾರಣ ಕನ್ನಡಿಗರು ತಮ್ಮ ಬಾಳು ಒದುಕುಗಳನ್ನು ತಿದ್ದಿಕೊಂಡು, ಅದಕ್ಕೊಂದು ಹೊಸ ತನವನ್ನು ತಂದುಕೊಳ್ಳಬೇಕು. ಎಲ್ಲ ಜಾನಪದ ಸಮೂಹಗಳೂ—ರಾಜಕೀಯವಾದುವೂ, ಸಾಮಾಜಿಕವಾದುವೂ, ಧಾರ್ಮಿಕವಾದುವೂ, ತಾತ್ತ್ವಿಕವಾದುವೂ—ಅವಗಲ್ಲಿ ವ್ಯಾಪಿಸಿ ಅಭಿವರ್ಧಿಸಿದಷ್ಟೂ ಸಾಹಿತ್ಯಕ್ಕೆ ಸ್ಫೂರ್ತಿಯೂ ಪುಷ್ಟಿಯೂ ಹಚ್ಚಾಗಿ ದೊರೆಯುವುವು.

ಪ್ರತ್ಯೇಕ ಕರ್ನಾಟಕ ಪ್ರಾಂತ.

ಕರ್ನಾಟಕ ಪ್ರದೇಶಗಳ ಏಕೀಕರಣ ಕಾರ್ಯವು ಈಜೆಗೆ ಸಮರ್ಪಕವಾಗಿ ಸಾಗಿಲ್ಲ. ಇದರ ಕಾರಣಗಳು ನಮಗೆ ಈಗ ಅಪ್ರಕೃತ. ಆ ಉದ್ದೇಶವನ್ನು ಮಾತ್ರ ನಾವು ಮರೆಯದೆ ಪ್ರಕಾಶಕ್ಕೆ ತರುತ್ತಿರಬೇಕು. ಹರಕು ಮುರುಕಾಗಿ ಒಡೆದು ಹೋಗಿರುವ ಕನ್ನಡನಾಡು ಮತ್ತೆ ಒಂದುಗೂಡಿದಲ್ಲದೆ ನಮ್ಮ ಜನಕ್ಕೂ ನಮ್ಮ ಭಾಷೆಗೂ ಏಳಿಗೆಯಾಗುವುದು ಮೈಸೂರು, ಹೈದರಾಬಾದು ಮೊದಲಾದ ದೇಶೀಯ ಸಂಸ್ಥಾನಗಳ ಪ್ರಸಕ್ತಿ ತೊಡಕಾದುದು. ಅದು ಹಾಗಿರಲಿ. ಬ್ರಿಟಿಷ್ ಸರಕಾರದ ಪ್ರತ್ಯಕ್ಷಾಧಿಪತ್ಯಕ್ಕೆ ಒಳಪಟ್ಟಿರುವ ಬೊಂಬಾಯಿ, ಮದ್ರಾಸು ಪ್ರಾಂತಗಳ ಕನ್ನಡ ಪ್ರದೇಶಗಳನ್ನೂ ಕೊಡಗನ್ನೂ ಸೇರಿಸಿ ಒಂದು ಪ್ರತ್ಯೇಕ ಕನ್ನಡ ಪ್ರಾಂತವನ್ನು ಏರ್ಪಡಿಸುವುದರಲ್ಲಿ ಕಷ್ಟವೇನೂ ಇಲ್ಲ. ಇದಕ್ಕೆ ಬೇಕಾಗಿರುವುದು ಸರಕಾರದ ಇಷ್ಟ. ಈ ವಿಚಾರದಲ್ಲಿ ಕನ್ನಡಿಗರಷ್ಟು ಅತಂತ್ರ ಸ್ಥಿತಿಯಲ್ಲಿ ಇಂಡಿಯಾ ದೇಶದ ಮತ್ತಾವ ದೇಶ್ಯ ಭಾಷೆಯವರೂ ಇಲ್ಲ. ನಮಗಿಂತ ಕಿರಿಯವರಾದ ಒಡ್ಡರಿಗೆ ಕ್ಷಿಪ್ರದಲ್ಲಿಯೇ ಸ್ವಂತ ಪ್ರಾಂತವೇರ್ಪಡುವಂತಿದೆ. ಈ ಪ್ರಶ್ನೆಯನ್ನು ನಮ್ಮ ಜನರು ಹಿಂದಕ್ಕೆ ಬೀಳಗೊಡಿಸದೆ ಬೇಗ ಮುಂದಕ್ಕೆ ನುಗ್ಗಿಸಬೇಕು. ಇದರಲ್ಲಿ ಮುಂಗಳೂರು ಕಡೆಯವರೂ, ಕೊಡಗಿನವರೂ ಇದು ವರೆಗೆ ತೋರಿರುವುದಕ್ಕಿಂತ ಹೆಚ್ಚು ಆಸಕ್ತಿ ತೋರಬೇಕೆಂದು ಬೇಡುತ್ತೇನೆ.

ಹಳೆಯ ತೆರದ ಪಾಂಡಿತ್ಯ.

ನಮ್ಮಲ್ಲಿ ಹಳೆಯ ತೆರದ ಪಾಂಡಿತ್ಯವು ಕಡಮೆಯಾಗ ಕೂಡದೆಂದು ನನ್ನ ಕೋರಿಕೆ. ಮೈಸೂರು ಯೂನಿವರ್ಸಿಟಿಯ ಕನ್ನಡದ ಯಂ. ಎ. ತರಗತಿಯಲ್ಲಿ ಪಂಡಿತ ಪರೀಕ್ಷೆಯ ಗ್ರಂಥಗಳು ಪಾಠವಾಗುತ್ತಿವೆಯೆಂಬುದು ನಿಜ. ಆ ಪಾಂಡಿತ್ಯದ ಬಗೆ ಬೇರೆ. ಅದು ತುಂಬಾ ಬೆಲೆಯುಳ್ಳದು. ಅದು ನಮಗೆ ಅವಶ್ಯವಾಗಿ ಬೇಕು. ಅದರ ಜೊತೆಗೆ ಪೂರ್ವಕಾಲದ, ಎಂದರೆ ಕಾವ್ಯ ಶಾಸ್ತ್ರ ವಾಕ್ಯಗಳನ್ನು ಮುಖಸ್ಥವಾಗಿ ಟ್ಟುಕೊಂಡಿರುವ, ಪಂಡಿತರ ಸಹಾಯವೂ ಬೇಕು. ಇವರಿಗೆ ಎಸ್. ಎಸ್. ಎಲ್. ಸಿ. ತರಗತಿಯ ವರೆಗಾದರೂ ಇಂಗ್ಲಿಷ್ ಭಾಷಾ ಪರಿಚಯವಿರಬೇಕು. ಇಂಥವರು ನಮ್ಮ ಪ್ರಾಥಮಿಕ ಮಾಧ್ಯಮಿಕ ಪಾಠಶಾಲೆಗಳಲ್ಲಿ ಬೋಧಕರಾದರೆ ನಮ್ಮ ಭಾಷೆಗೆ ಮಹೋಪಕಾರವಾದೀತು.

ಕನ್ನಡ ಪಾಠಕ್ರಮ.

ನಮ್ಮ ಪರಿಷತ್ತು ಕನ್ನಡ ಪಠ್ಯಪುಸ್ತಕಗಳ ಕಡೆಗೂ ಪಾಠಕ್ರಮಗಳ ಕಡೆಗೂ ಹೆಚ್ಚು ಗಮನ ಕೊಡಬೇಕೆಂದು ತೋರುತ್ತದೆ. ಈ ಸಂಗತಿ ಹೊರಗಡೆ ಹೇಗಿದೆಯೋ ನನಗೆ ತಿಳಿಯದು; ಮೈಸೂರಿನಲ್ಲಿ ಮಾತ್ರ ಪರಿಷ್ಕಾರಕ್ಕೆಡೆಬಿಟ್ಟಿದೆ. ಪಾಠ ಪುಸ್ತಕಗಳನ್ನಾರಿಸುವುದರಲ್ಲಿ ವಿಷಯ ಗಾರವ, ಭಾವಪುಷ್ಟಿ, ಶೈಲಿಯ ಶುದ್ಧತೆ—ಈ ಮೂರಂಶಗಳನ್ನು ಮಾತ್ರವೇ ಗಣನೆಗೆ ತೆಗೆದುಕೊಳ್ಳಬೇಕು. ನೀರಸವಾದ ಗ್ರಂಥಗಳಿಂದ ವಿದ್ಯಾರ್ಥಿಗಳಿಗೆ ಬೇಸರ ಹುಟ್ಟಿ, ಆಮೇಲೆ ಅವರಿಗೆ ಕನ್ನಡವೆಂದರೆ ಪಾಕೆನ್ನಿಸುವುದು. ಅದರಲ್ಲಿಯೂ ಎಳೆಯ ಮಕ್ಕಳೋದುವ ಪುಸ್ತಕಗಳನ್ನಾರಿಸುವುದರಲ್ಲಿ ವಿಶೇಷ ವಿವೇಚನೆ ಜಾಗರೂಕತೆಗಳಿಂಬೇಕು. "ಕನ್ನಡದಲ್ಲಿರುವುದಿಷ್ಟೇನೆ?"—ಎಂದೆನ್ನಿಸುವ ಹಾಗಾಗಬಾರದು.

ಕನ್ನಡ ಪತ್ರಿಕೆಗಳು.

ಭಾಷೆ ಸಾಹಿತ್ಯಗಳಸ್ಥಿತಿಯನ್ನು ಚೆನ್ನಾಗಿರಿಸುವುದಕ್ಕೂ, ಕೆಡಿಸುವುದಕ್ಕೂ ಶಕ್ತಿಯಿರತಕ್ಕ ಇತರ ಜನವರ್ಗಗಳಲ್ಲಿ ಮುಖ್ಯರಾದವರು (೧) ವೈತ್ತಪತ್ರಿಕೋದ್ಯೋಗಿಗಳು, (೨) ರಾಜ್ಯ ವಿಚಾರಗಳು, (೩) ಸರಕಾರದ ಇಲಾಖೆಗಳವರು, (೪) ಹೆಂಗಸರು.

ಕನ್ನಡ ಪತ್ರಿಕೆಗಳು ಅಂದದಲ್ಲಿಯೂ, ರೀತಿಯಲ್ಲಿಯೂ ಉತ್ತಮಗೊಳ್ಳುತ್ತಿವೆ. ಅವುಗಳಲ್ಲಿ ಕೆಲವು ಸಾಹಿತ್ಯ ಸೇವೆಯನ್ನು ತಮ್ಮ ಮುಖ್ಯೋದ್ದೇಶದ ಭಾಗವಾಗಿ ಮಾಡಿಕೊಂಡಿವೆ. ಎಲ್ಲ ಪತ್ರಿಕೆಗಳೂ ಭಾಷಾವಾರಿಶುದ್ಧ್ಯದ ಕಡೆಗೂ ಸಾಹಿತ್ಯ ಗುಣದ ಕಡೆಗೂ ಲಕ್ಷ್ಯಕೊಡುವುದಾದರೆ ನಮಗೆ ಹೆಚ್ಚಾದ ಉಪಕಾರವಾಗುವುದ. ಜನ ಸಾಮಾನ್ಯದ ನುಡಿಯ ರೀತಿ ಸರಿಯಾಗುವುದು ಅವರು ವರ್ಷದಲ್ಲೆಲ್ಲೋ ಒಂದೆರಡು ದಿನ ಓದುವ ಉತ್ಕೃಷ್ಟ ಲೇಖನದಿಂದಲ್ಲ; ಅವರು ಸ್ವತಿದಿನವೂ ಓದುವ ಸಾಮಾನ್ಯ ಲೇಖನದಿಂದ. ಆದ ಕಾರಣ ದಿನಂಪ್ರತಿಯ ಲೋಕವಾರ್ತೆಯನ್ನು ಕುರಿತು ಬರೆಯುವಾಗಲೂ ಲೇಖಕರು ಭಾಷಾ ಮರ್ಯಾದೆಯನ್ನು ಗಮನದಲ್ಲಿಡುವುದು ಅವಶ್ಯವಾಗಿದೆ.

ನಮ್ಮ ವಾಗ್ಮಿಗಳು.

ರಾಜ್ಯವಿಚಾರಿಗಳೆಂದರೆ ಶಾಸನ ಸಭೆಗಳಲ್ಲಿಯೂ, ಪ್ರಜಾ ಸಂಸ್ಥೆಗಳಲ್ಲಿಯೂ ಉಪನ್ಯಾಸಮಾಡಿ ಚರ್ಚೆ ನಡೆಸತಕ್ಕವರು. ಕನ್ನಡದ ವಾಗ್ಝೋರಣೆಯ ವೇಗವೂ ಬಲವೂ ವೃದ್ಧಿಯಾಗಬೇಕಾದುದು ಇವರಿಂದ. ಇವರ ಭಾಷಣಗಳಲ್ಲಿ ಸ್ಫೂರ್ತಿಯೂ ಗಂಭೀರವೂ ಚಮತ್ಕಾರವೂ ಇದ್ದಷ್ಟೂ ಇವರ ಶ್ರೋತೃಗಳಿಗೂ, ವಾಚಕರಿಗೂ ಸಾಹಿತ್ಯ ಸಂಸ್ಕಾರವುಂಟಾಗುವುದು. ಆದ ಕಾರಣ ಈ ರಾಜ್ಯವಿಚಾರ ಕರ್ತರೂ ಆಗಾಗ ಕಾಲ ವ್ಯವಧಾನಮಾಡಿಕೊಂಡು ಸ್ವಲ್ಪವಾದರೂ ಕಾವ್ಯ ಸರಿಚಯ ಸಂಪಾದಿಸಿದರೆ ಒಳ್ಳೆಯದಾಗುವುದೆಂದು ಆ ಮಹನೀಯರಿಗೆ ಅತ್ಯಂತ ವಿನಯದಿಂದ ಬಿನ್ನಹಮಾಡಿಕೊಳ್ಳುತ್ತೇನೆ.

ಕಛೇರಿಯ ಕನ್ನಡ.

ಸರಕಾರದ ನಾನಾ ಇಲಾಖೆಗಳವರು ದೇಶ ಭಾಷೆಗೆ ಸಹಾಯಮಾಡಲು ಬಹು ವಿಧವಾಗಿ ಅವಕಾಶವುಂಟು. ಮುಖ್ಯವಾಗಿ ಅವುಗಳ ಲೆಕ್ಕ ಪತ್ರಗಳನ್ನು ಕೂಡಿದ ಮಟ್ಟಿಗೂ ಕನ್ನಡದಲ್ಲಿಯೇ ಬರೆಯಿಸಿಡಬೇಕು. ಅವುಗಳ ನಾನಾ ಪಟ್ಟಿಗಳೂ, ವರದಿಗಳೂ ಸಾಮಾನ್ಯ ಜನರನ್ನು ಮುಟ್ಟುತ್ತವೆ. ಅವುಗಳಲ್ಲಿ ಒಳ್ಳೆಯ ಭಾಷೆಯಿದ್ದರೆ ಎಲ್ಲರಿಗೂ ಒಳ್ಳೆಯದೇ.

ಈ ಸಂದರ್ಭದಲ್ಲಿ ಬೊಂಬಾಯಿ ಮದ್ರಾಸು ಪ್ರಾಂತಗಳ ಅಂಚೆಯ ಇಲಾಖೆಗಳವರು ತಮ್ಮ ಕೆಲವು ನಿರ್ಬಂಧನೆಗಳ ಮತ್ತು ಪಟ್ಟಿಕೆಗಳ ಕನ್ನಡ ಪ್ರತಿಯನ್ನು ತಿದ್ದಿ ಸಂಪಡಿಸುವ ಕಾರ್ಯವನ್ನು ಪರಿಷತ್ತಿನ ಕಾರ್ಯದರ್ಶಿಗಳವರಿಗೆ ಒಪ್ಪಿಸಿರುವರೆಂದು ಕೇಳಲು ಸಂತೋಷವಾಗಿದೆ.

ನಮ್ಮ ಸೋದರಿಯರ ಭಾಷಾ ಸೇವೆ.

ಈಜೆಗೆ ನಮ್ಮ ಸೋದರಿಯರು ದೇಶ ಭಾಷಾ ಸೇವೆಯ ಕಡೆಗೆ ಹೆಚ್ಚು ಗಮನ ಕೊಡುತ್ತಿರುವ ಸಂಗತಿ ವಿಶೇಷ ಸಂತೋಷಕ್ಕೂ ಹೆಮ್ಮೆಗೂ ಕಾರಣವಾದದ್ದು. ಅವರಲ್ಲಿ ವಿದ್ಯೆ ಹರಡಿದಂತೆಲ್ಲಾ ಗ್ರಂಥಗಳಿಗೆ ಆಶ್ರಯ ಹೆಚ್ಚುವುದು ಸ್ವಾಭಾವಿಕವಾಗಿದೆ. ಕಾವ್ಯರಾಜ್ಯದಲ್ಲಿ ಎಲ್ಲರೂ ಸಮಾನರು. ಅಲ್ಲಿ ಜಾತಿ ಭೇದ, ಮತಭೇದ, ಉದ್ಯೋಗಭೇದ, ಸಂಪತ್ತಿನ ಭೇದ—ಇವು ಯಾವುವೂ ಎಣಿಕೆಗೆ ಬರುವುದಿಲ್ಲ. ಕಾವ್ಯವು ಬಡವರ ಭಾಗ್ಯ. ಈ ಭಾಗ್ಯದ ಸೌಖ್ಯವು ಮನೆಯಲ್ಲಿ ತುಂಬಿರುವಂತೆ ಮಾಡುವುದು ಗೃಹಿಣಿಯರ ಕರ್ತವ್ಯ. ಅವರು ಭಾರತ ಭಾಗವತಾದಿ ಕಾವ್ಯಗಳನ್ನು ರಾಗದಿಂದ ಓದಿ ಒಂದು ಕಡೆ ಮನೆಯ ಜನರಿಗೂ ಇನ್ನೊಂದು ಕಡೆ ಭಾಷಾ ಮೂತೆಗೂ ಉಪಕಾರ ಮಾಡುವುದು ಸುಲಭ.

ಉಪಸಂಹಾರ.

ನಮ್ಮ ಸಂಣ ಕೊರತೆಗಳು ಹಾಗಿರಲಿ. ಅವು ನಮ್ಮನ್ನು ಕುಗ್ಗಿಸಬೇಕಾಗುದಿಲ್ಲ. ಮಾತ್ಸರ್ಯವನ್ನು ತೊರೆದು ಒಗ್ಗಟ್ಟಿನಿಂದ ಕನ್ನಡದ ಸೇವಕರು ಕೆಲಸ ಮಾಡಿದರೆ ನಮ್ಮ ಜನಧನ ದಾರಿದ್ರ್ಯವನ್ನು ನೀಗುದೊಂದು ಮಹಾ ಕಷ್ಟವಲ್ಲ.

ದಿಗಂತವು ಪ್ರಕಾಶಮಾನವಾಗಿದೆ. ಪಕ್ಷಿಗಳು ಸುತೋಷದ ಕಲರವದೊಡನೆ ಆಕಾಶದ ಕಡೆಗೆ ಹಾರುತ್ತಿವೆ. ನನ್ನೆದೆಯಲ್ಲಿ ಆಶೆಯುಕ್ಕುತ್ತಿದೆ. ಈಗ ೧೦—೧೫ ವರ್ಷಗಳ ಕೆಳಗೆ ಬೆಂಗಳೂರು ಮೈಸೂರುಗಳಲ್ಲಿ ಕನ್ನಡದ ಸಭೆ ಹೇಗೆ ಇರುತ್ತಿತ್ತೆಂಬುದನ್ನು ನೆನೆದು ಈಗಿನ ತುಂಬಿ ಕಿಕ್ಕಿರಿಯುವ ಸಭೆಗಳನ್ನು ನೋಡಿದರೆ—ಆಗಿನ ತರುಣರು ಕನ್ನಡಕ್ಕೆ ತೋರುತ್ತಿದ್ದ ಉತ್ಸಾಹವನ್ನು ಈಗಿನವರದರೊಡನೆ ಹೋಲಿಸಿದರೆ—ಹೋಗಿದ್ದ ಜೀವ ತಿರುಗಿ ಬಂದಿತೆಂದೆನ್ನಿಸುತ್ತದೆ. ಈಗ ನಿರಾಶೆಗೆಡೆಯೆಲ್ಲಿ? ನಮಗಿರುವ ಕಷ್ಟಗಳನೊತ್ತಟ್ಟಿಗಿರಿಸಿ ಮುಂದೆ ಇರುವ ಕರ್ತವ್ಯದಲ್ಲಿ ಮನಸ್ಸಿಡೋಣ. ನಮ್ಮ ಭಾಷೆಯು ಚೆನ್ನಾಗಿ ಬಾಳಿದರೆ ನಮ್ಮ ಜನದ ಬಾಳು ಮೇಲಾಗುತ್ತದೆ. ಅದನ್ನು ಸಮೃದ್ಧಿಪಡಿಸುವುದಕ್ಕಿಂತ ನಮಗೆ ದೊಡ್ಡ ಧರ್ಮವಾವುದು? ಅದರ ಕೋಶಾಗಾರದಲ್ಲಿ ಎಲ್ಲ ಸುಪತ್ತುಗಳೂ ತುಂಬಿರಬೇಕು. ಅವುಗಳನ್ನು ನಮ್ಮ ಸಂತತ ಪ್ರಯತ್ನದಿಂದ ನಿರ್ಮಿಸಿ ಹೆಚ್ಚಿಸಬೇಕು. ನಮ್ಮಲ್ಲಿಲ್ಲದುದನ್ನು, ನಮ್ಮಿಂದಾಗದುದನ್ನು, ದಶ ದಿಕ್ಕುಗಳಿಂದಲೂ ಶೇಖರಿಸಿ ತುಂಬೇಕು. ರಾಜ ನಂದಿನಿಯ ಸಿಂಗಾರಕ್ಕೆ ಕಾಶ್ಮೀರದ ಅಗರೂ, ನೇಪಾಳದ ಕಸ್ತೂರಿಯೂ, ಗಾಂಧಾರದ ಕೇಸರಿಯೂ, ಪಾರಸಿಯ ಪನ್ನೀರೂ, ಮೈಸೂರಿನ ಚಂದನವೂ, ಮಲೆಯೂಳದ ಘೂಪವೂ ಬಂದು ಒದಗುವಂತೆ, ಭೂಮಂಡಲದ ಎಲ್ಲ ಸಾಹಿತ್ಯ ಎಲ್ಲ ವೈದುಷ್ಯಗಳ ಸಾರ ವಸ್ತುಗಳೂ ನಮ್ಮ ಭಾಷೆಯ ಭಂಡಾರಕ್ಕೆ ಬಂದು ನಮ್ಮ ಸ್ವಶಕ್ತಿ ಕಲ್ಪಿತಗಳಾದ ನಾನಾ ಪರಿಕರಗಳೊಡಗೂಡಿ, ನಮ್ಮ ಜನದ ಜೀವನಕ್ಕನುವಾಗಬೇಕು. **ಕನ್ನಡದ ಒಂದೊಂದು ನುಡಿಯೂ ಕಡಿಯೊಗಬೇಕು, ಸಿಡಿಲಾಗಬೇಕು, ನಕ್ಷತ್ರವಾಗಬೇಕು, ಅಮೃತಬಿಂದುವಾಗಬೇಕು.** ಇದೀಗ ನಮ್ಮ ಆಶೆ; ಈ ಆಶೆಗಾಗಿ ದುಡಿಯುವುದರಲ್ಲಿ ಎಲ್ಲ ದೇಶಭಾಷಾ ಬಾಂಧವರೂ ಅವರ ಅವೃಷ್ಟ ಶಕ್ತಿಗಳೂ ಸಹಕರಿಸಲಿ.

ಕೊಡಗಿನ ಮಹಾಜನರೆ, ನಿಮ್ಮ ದೇಶವು ಸೃಷ್ಟಿಯ ಸೌಂದರ್ಯದಿಂದಲೂ, ನಿಮ್ಮ ಸಂಸ್ಕೃತಿ ಉದಾರತೆಗಳಿಂದಲೂ ಕನ್ನಡಿಗರಿಗೆಲ್ಲ ಅತ್ಯಂತ ಪ್ರಿಯವಾಗಿದೆ. ಕರ್ಣಾಟಕ ಮಹಾಸಮೂಹದಲ್ಲಿ ಈ ನಾಡು ತಕ್ಕಷ್ಟು ಮುಂದೆ ಬಂದು ಸೇರಿಲ್ಲವಲ್ಲಾ ಎಂಬ ಕಳವಳವು ಕೆಲವರಿಗೆ ಇದು ವರೆಗೂ ಇದ್ದಿತು. ಅಂಥಾ ಕೊರತೆಗೆ ಕಾರಣವಿಲ್ಲವೆಂಬದು ಈಗ ಸ್ಪಷ್ಟವಾಗಿದೆ. ತಾವು ಭ್ರಾತೃವಾತ್ಸಲ್ಯದಿಂದ ಹೊರಗಿನ ಕನ್ನಡಿಗರನ್ನು ಬರಮಾಡಿಕೊಂಡು, ಕರ್ನಾಟಕ ಸಾಹಿತ್ಯ ಪರಿಷತ್ತು ತಮಗೂ ಸೇರಿದ್ದೆಂದು ಭಾವಿಸಿ ಅದನ್ನು ಇಲ್ಲಿಗೆ ಕರೆದು ಆದರಿಸಿರುವುದಕ್ಕಾಗಿ ಎಲ್ಲ ಕನ್ನಡಿಗರ ಪರವಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ನಿಮ್ಮ ನನ್ನ ಸೋದರಭಾವವೂ ನಮ್ಮೆಲ್ಲರ ನುಡಿಯೂ, ನಾಡೂ ಏಳಿಗೆ ಪಡೆಯಲಿ.

Wanted.

Assets 17500000 Exeeeds. | Pre—Income 33 Lacks.

Realy Capable and Influential **Special Agent** having organising Capacity either on commission basis or salary for the NATIONAL INSURANCE CO., LTD., Calcutta. (Est 1906.)

Please apply to—

CHIEF ORGANISER,
National Insurance Co., Ltd.,
Arcot Srinivas Char St.,
12—2 Bangalore City.

ಕೊಡಗಿನಲ್ಲಿ ಸತ್ಯಾಗ್ರಹ.

ಹಸ್ತ ಪತ್ರ ಹಂಚಿದ ನಾಲ್ಕು ಯುವಕರಿಗೆ ಮೂರ್ನೂರು ತಿಂಗಳ ಅಥವಾನೆ ಬಿನ್ನವೂ, ಹತ್ತತ್ತು ರೂಪಾಯಿ ಇನಾಮೂ!!

ಜುಲುಮೂನೆ ವಸೂಲಾತಿಗಾಗಿ ಕೋವಿ, ಹಸಗಳ ಜಪ್ತಿ.

ಮಡಿಕೇರಿಯಲ್ಲಿ ಪೊಲೀಸರಿಂದ ಮನೆಗಳ ಜಪ್ತಿ.

ಕಳೆದ ತಾ. 26ರಲ್ಲಿ ಹುದಿಕೇರಿಯಲ್ಲಿ ಕಾಂಗ್ರೆಸ್ಸಿನ ಹಸ್ತಪತ್ರಗಳನ್ನು ಹಂಚಿದಕ್ಕಾಗಿ ದಸ್ತಗಿರಿ ಮಾಡಲ್ಪಟ್ಟ ಶ್ರೀಯುತರುಗಳಾದ ಐಯ್ಯಮಾಡ ಬೆಳ್ಯಪ್ಪನವರು, ಚೇನಿರ ಕುಶಾಲಪ್ಪನವರು ಮತ್ತು ಚೊಟ್ಟಿಯಂಡಮಾಡ ಐಯ್ಯಣ್ಣನವರು ಮತ್ತು ತಾ. 28ರಲ್ಲಿ ವೀರಾಜಪೇಟೆಯಲ್ಲಿ ಕಾಂಗ್ರೆಸ್ಸಿನ ಅದೇ ಕಾರ್ಯವನ್ನು ನಡಿಸಿದಕ್ಕಾಗಿ ಕೈದು ಮಾಡಲ್ಪಟ್ಟ ಶ್ರೀಯುತ ಯಸ್. ಆರ್. ನಾರಾಯಣರಾವ್‌ರವರು—ಇವರು ನಾಲ್ವರ ವಿಚಾರವು ಕ್ರಿಸ್‌ಮಸ್ ರಜೆ ತೀರಿದ ಮೇಲೆ ವೀರಾಜಪೇಟೆ ಮ್ಯಾನ್ಸಿಫ್ ಕೋರ್ಟಿನಲ್ಲಿ ಈ ತಾ. 3ರಲ್ಲಿ ನಡೆದು, ಇವರು ನಾಲ್ಕು ಜನರಿಗೂ ಮೂರ್ನೂರು ತಿಂಗಳು ಕಠಿಣ ಸಜೆ ಮತ್ತು ಹತ್ತತ್ತು ರೂ. ಜುಲುಮಾನೆಯೂ, ಜುಲುಮಾನೆ ಕೊಡದೆ ತಪ್ಪಿದರೆ ಒಂದೊಂದು ತಿಂಗಳು ಹೆಚ್ಚಿನ ಸಜೆಯೂ ವಿಧಿಸಲಾಯಿತು. ಮರು ದಿನ ಇವರು ಕಣ್ಣಾನೂರು ಜೈಲಿಗೆ ಕಳುಹಿಸಲ್ಪಟ್ಟರು.

ಶಾಸನ ಭಂಗ ಚಳವಳದಲ್ಲಿ ಭಾಗಿಯಾಗಿ ಈಗ ಕಾರಾಗೃಹವಾಸದಲ್ಲಿರುವ ಶ್ರೀಯುತ ಕಡೇಮಾಡ ನಂಜಪ್ಪನವರ 20ರೂ. ಜುಲುಮಾನೆ ವಸೂಲಾತಿಗಾಗಿ ಅವರ ತಂದೆ ಐಯ್ಯಪ್ಪನವರ ಒಂದು ಹಸವು ಜಪ್ತಿ ಮಾಡಲಾಗಿದೆಯೆಂದೂ, ಮೆ. ಐಯ್ಯಪ್ಪನವರು ಲಾಯರು ಮೆ. ಚೇಯಕಪೂವಂಡ ಭೀಮಯ್ಯನವರ ಮೂಲಕ ತಕರಾರು ಅರ್ಜಿ ಹಾಕಿದನ್ನು ಮುನ್ಸಿಫ್ ಕೋರ್ಟಿನಲ್ಲಿ ಈ ತಾ 7ರಲ್ಲಿ ವಿಚಾರಕ್ಕೆ ಇಡಲಾಗಿದೆಯೆಂದೂ, ಹಾಗೆಯೇ ಈಗ ಜೈಲಿನಲ್ಲಿರುವ ಶ್ರೀಯುತ ಸಣ್ಣುವಂಡ ಬೋಪಯ್ಯನವರ 20 ರೂ. ಜುಲುಮಾನೆಗಾಗಿ ಅವರ ಅಣ್ಣ ಚಂಗಪ್ಪನವರ ಕೋವಿಯೊಂದು ಜಪ್ತಿ ಮಾಡಲಾಗಿದೆಯೆಂದೂ, ಮೆ. ಚಂಗಪ್ಪನವರು ಲಾಯರು ಮೆ. ಆರ್. ಯಸ್. ಸುಜೀವರಾಯರ ಮೂಲಕ ತಕರಾರು ಅರ್ಜಿ ಹಾಕಿದನ್ನು ಈ ತಾರೀಕು 19ರಲ್ಲಿ ವಿಚಾರಕ್ಕೆ ಇಡಲಾಗಿದೆಯೆಂದೂ ತಿಳಿಯಬರುತ್ತದೆ.

ಈ ದಿನ ಬೆಳಿಗ್ಗೆ ಸುಮಾರು 7½ ಗಂಟೆಗೆ ಪೊಲೀಸು ಸಬ್ ಇನ್‌ಸ್ಪೆಕ್ಟರುಗಳು ಕೆಲವು ಪೊಲೀಸರೊಂದಿಗೆ ಮೆ. ಸಿ. ಯನ್. ವೆಂಕಪ್ಪಯ್ಯನವರ ಮನೆಯನ್ನೂ ಮತ್ತು ಅವರ ಕ್ಲಾರ್ಕರಾದ ಮೆ ಆರ್. ಶ್ರೀನಿವಾಸಮೂರ್ತಿಯವರ ಮನೆಯನ್ನೂ ಕಾಂಗ್ರೆಸ್ಸಿನ ಹಸ್ತ ಪತ್ರಿಕೆಗಳನ್ನು ತಯಾರಿಸುತ್ತಿರುವ "ಸೈಕ್ಲೊಸ್ಟೈಲ್" ಯಂತ್ರವನ್ನು ಕಂಡು ಹಿಡಿಯುವ ಬಗ್ಗೆ ಜಡ್ತಿ ಮಾಡಿದರೆಂದೂ, ಆದರೆ ಸದರಿ ಯಂತ್ರವು ಎಲ್ಲಿಯೂ ಸಿಕ್ಕಲಿಲ್ಲವೆಂದೂ ತಿಳಿಯುತ್ತೇವೆ.

ಒಳದೇಶ.

ಕಳೆದ ನವಂಬರು ತಿಂಗಳಲ್ಲಿ ಕೊಡಗಿನಲ್ಲಿ 292 ಮರಣಗಳೂ, 277 ಜನನಗಳೂ ಸಂಭವಿಸಿದವು.

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಏಟು ಗೊಂದು ಈ ತಾ. 16 ರಲ್ಲಿ ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ನಡೆಯಲಿಕ್ಕಿದೆ.

ಡಿಸ್ಟ್ರಿಕ್ಟ್ ಬೋರ್ಡಿನ ಉಪಾಧ್ಯಕ್ಷರಾಗಿದ್ದ ಮೆ. ಪಾಂಡಂಡ ಎ. ಚಂಗಪ್ಪನವರು ಅನರ್ಹ ಅಧ್ಯಕ್ಷರಾಗಿ ಚೀಫ್ ಕಮಿಷನರವರಿಂದ ನೇಮಿಸಲ್ಪಟ್ಟಿರುವರು.

ಮಡಿಕೇರಿ ಮುನ್ಸಿಪಲ್ ಕಮಿಟಿಯ ಮೆಂಬರರಾಗಿದ್ದ ಮೆ. ಕಿಗ್ಗಾಲು ಶಾಂತಯ್ಯನವರು ಈ ತಾ. 30ಲ್ಲಿ ಕೋವೆ ಕಾಯಿಲೆಯಿಂದ ತಿವಾಧೀನರಾದರೆಂದು ತಿಳಿಯಲು ವಿಷಾದಿಸುತ್ತೇವೆ.

ಶಾಸನ ಭಂಗಕ್ಕಾಗಿ ಜೈಲುವಾಸವನ್ನು ಅನುಭವಿಸುತ್ತಿರುವ ಶ್ರೀಯುತ ಕೊಳ್ಳಿಮಾಡ ಕರುಂಬಯ್ಯನವರು ಕಳೆದ ತಿಂಗಳಲ್ಲಿ ಕಣ್ಣಾನೂರು ಜೈಲಿನಿಂದ ಕೊಯಮುತ್ತೂರು ಜೈಲಿಗೆ ವರ್ಗಾಯಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ

ಮಡಿಕೇರಿ ಮುನ್ಸಿಪಲ್ ಕಮಿಟಿಯ ಬರುವ ಜುನಾವಣೆಗೆ ಉವೇದುವಾರರು ಈ ತಾ. 16 ರೊಳಗೆ ತಮ್ಮ ನೇಮಕ ಪತ್ರವನ್ನು ಕಳುಹಿಸಬೇಕೆಂತಲೂ, ಈ ತಾ. 23ನೇ ಸೋಮವಾರ ಓಟುಗಳು ತೆಗೆದುಕೊಳ್ಳಲಾಗುವದೆಂತಲೂ ಮುನ್ಸಿಪಲ್ ಕಮಿಟಿಯವರು ನಿರ್ಣಯಿಸಿರುವರು.

ಹೊಸ ವರ್ಷದ ಬಿರುದಾವಳಿಗಳ ಪಟ್ಟಿಯಲ್ಲಿ ಕೊಡಗಿನ ಚೀಫ್ ಕಮಿಷನರಾದ ಲೆಫ್ಟೆನೆಂಟ್ ಕರ್ನಲ್ ಆರ್. ಜೆ. ಸಿ. ಬರ್ಕ್‌ರವರಿಗೆ ಸರ್ (ನೈಟ್‌ಹುಡ್) ಬಿರುದೂ, ಮೊದಲು ಕೊಡಗಿನ ಕಮಿಷನರಾಗಿದ್ದು ಈಗ ಮದ್ರಾಸಿನ ರೆವಿನ್ಯು ಬೋರ್ಡಿನ ಮೆಂಬರರಾಗಿರುವ ಮೆ. ಸಿ. ಎ. ಸೂಟರ್‌ರವರಿಗೆ ಸಿ. ಯಸ್. ಐ. ಬಿರುದೂ ದೊರೆತಿವೆ.

ಈ ತಾ. 3 ರ ಬೆಳಿಗ್ಗೆ ಮೋಡರ್ನ್ ಸರ್ವಿಸಿನ ಬಸ್ಸೊಂದು ಮೈಸೂರಿನಿಂದ ಮಡಿಕೇರಿಗೆ ಬರುತ್ತಿದ್ದಾಗ್ಗೆ ಬಿಳಿಕೆರೆ ಬಳಿ ಮಗುಚಿ ಬಿದ್ದು, ಅದರಲ್ಲಿದ್ದ 13 ಪ್ರಯಾಣಿಕರಿಗೆ ಜಖಂ ಆಗಿದೆಯೆಂತಲೂ, ಅವರ ಪೈಕಿ ಹೆಚ್ಚು ಪೆಟ್ಟಾದ ಮೆ ಕೆಂಬಡತಂಡ ಮಂದಣ್ಣನವರು ಮೈಸೂರು ಆಸ್ಪತ್ರೆಯಲ್ಲಿ ಸ್ವಲ್ಪ ಅಪಾಯ ಸ್ಥಿತಿಯಲ್ಲಿರುವರೆಂದೂ ಸುದ್ದಿ.

ವೀರಾಜಪೇಟೆ ಬೆಂಚ್ ಮೇಜಿಸ್ಟ್ರೇಟರುಗಳಾಗಿರುವ ಮೆ. ಗಳಾದ ಪಾಲೇಕಂಡ ಬೆಳ್ಯಪ್ಪನವರು (ಅಧ್ಯಕ್ಷರು) ಅಪ್ಪಾರಂಡ ಬಿ. ಚಂಗಪ್ಪನವರು, ನಡಿಕೇರಿಯಂಡ ಬಿ. ಸೋಮಣ್ಣನವರು, ಡಿ. ಹಸನ್ ಜ್ಯಾರಿಯವರು ಮತ್ತು ಬಿಟ್ಟಿಯಂಡ ಉತ್ತಯ್ಯನವರು—ಇವರು ಐವರ ಅಧಿಕಾರವನ್ನು 5 ವರ್ಷ ಹೆಚ್ಚಿಸಲಾಗಿದೆಯೆಂದು ಚೀಫ್ ಕಮಿಷನರು ಪ್ರಕಟಿಸಿರುವರು.

ತಾ. 18—12—32 ರಲ್ಲಿ ಮಡಿಕೇರಿಯಲ್ಲಿ ನಡೆದ ಸಭೆಯವರು ಕೊಡಗಿನ ಭವಿಷ್ಯತ್ತನ್ನು ಕುರಿತು ಮಾಡಿದ ತೀರ್ಮಾನದ ತಂತೀ ವಾರ್ತೆಯು ಲಂಡನಿಗೆ ತಲಪಿದೆಯೆಂತಲೂ, ಈ ವಿಷಯವನ್ನು ಈಗ ಚೆನ್ನಾಗಿ ಆಲೋಚಿಸಲು ಸಾಧ್ಯವಿಲ್ಲವೆಂತ ಮೈಸೂರಿನ ದಿವಾನರಾದ ಸರ್ ಮಿರ್ಜಾ ಇಸ್ಮೈಲ್‌ರವರ ಅಭಿಪ್ರಾಯವೆಂತಲೂ "ಹಿಂದೂ" ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಇನ್ನು ಮುಂದೆ ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ 13 ಜುನಾಯಿತ ಮೆಂಬರುಗಳೂ, ನಾಲ್ಕು ಉದ್ಯೋಗಸ್ಥ ಮೆಂಬರುಗಳೂ ಮತ್ತು ಹಿಂದುಳಿದ ಪಂಗಡದವರ ಪರವಾಗಿ ಚೀಫ್ ಕಮಿಷನರಿಂದ ನೇಮಿಸಲ್ಪಡುವ ಎರಡು ಮೆಂಬರುಗಳೂ ಇರಬೇಕೆಂತಲೂ, ಅಧ್ಯಕ್ಷರನ್ನು ಮೆಂಬರುಗಳ ಪೈಕಿಯಿಂದ ನೇಮಿಸುವ ಅಥವಾ ಬೋರ್ಡಿನವರೇ ಜುನಾಯಿಸುವಂತೆ ಅಧಿಕಾರಕೊಡುವ ಹಕ್ಕು ಚೀಫ್ ಕಮಿಷನರಿಗೆ ಇರತಕ್ಕದೆಂತಲೂ, ಉಪಾಧ್ಯಕ್ಷರನ್ನು ಬೋರ್ಡಿನವರೇ ತಮ್ಮೊಳಗಿನಿಂದ ಆರಿಸಿಕೊಳ್ಳತಕ್ಕದೆಂತಲೂ ಗಜೆಟಿನಲ್ಲಿ ಪ್ರಕಟವಾಗಿದೆ.

ಕೊಡಗು ದೇವಸ್ಥಾನಗಳ ಕಮಿಟಿಯಲ್ಲಿ ಮಡಿಕೇರಿ ಮತ್ತು ನಂಜರಾಜ ಪಟ್ಟಗಳ ಪರ ಮೆಂಬರಾಗಿರುವ ಮೆ. ಕೆ. ಕೃಷ್ಣಮೂರ್ತಿಯವರ ಮತ್ತು ಮೆ ಕೆ. ಕಸಪಯ್ಯನವರ ಮತ್ತು ಎಡೆನಾಲ್ಕು ನಾಡು ಮತ್ತು ಕಿಗ್ಗಟ್ಟು ನಾಡು ತಾಲೋಕುಗಳ ಪರ ಮೆಂಬರಾಗಿದ್ದ ಲೇಟ್ ಮೆ. ಗಿರಿಗೌಡನ ನಂಜಪ್ಪನವರ ಮೆಂಬರುತನದ ಅವಧಿಯು ಈ ತಾ. 15ರಲ್ಲಿ ಪೂರೈಸುವುದರಿಂದ ಇವರ ಬದಲು ಮೆಂಬರುಗಳ ಜುನಾವಣೆ ಬಗ್ಗೆ ವೀರಾಜಪೇಟೆಯಲ್ಲಿ ಈ ತಾ. 18 ರಲ್ಲಿಯೂ, ಮಡಿಕೇರಿಯಲ್ಲಿ ಈ ತಾ. 20 ರಲ್ಲಿಯೂ ಓಟುಗಳು ತೆಗೆಯಲ್ಪಡುವವೆಂದು ಪ್ರಕಟವಾಗಿದೆ.

ಮೆ. ಸೋಮೆಯಂಡ ಅಚ್ಚಯ್ಯನವರು ಮಡಿಕೇರಿ ಓಂಕಾರೇಶ್ವರ ದೇವಸ್ಥಾನವನ್ನು ಹರಿಜನರ ಪ್ರವೇಶಕ್ಕೆ ಬಿಡದೆ ಹೋದರೆ ತಾವು ಸದರಿ ದೇವಸ್ಥಾನದಲ್ಲಿ ಜನವರಿ ತಾ. 2 ರಲ್ಲಿ ಉಪವಾಸವ್ರತ ಕೈಕೊಳ್ಳುತ್ತೇನೆಂದು ಎರಡು ವಾರಗಳ ಹಿಂದೆ ಮಹಾತ್ಮ ಗಾಂಧಿಯವರಿಗೂ, ಕೊಡಗು ಮುಜರ್ರಾಯಿ ಇಲಾಖೆಯ ಅಧ್ಯಕ್ಷರಿಗೂ ಪತ್ರಗಳನ್ನು ಬರೆದು, ಅದೇ ಮೇರೆ ಈ ತಾ. 2 ರಲ್ಲಿ ಅಲ್ಲಿ ಅವರು ಉಪವಾಸವನ್ನು ಪ್ರಾರಂಭಿಸಿದರು. ತಾ. 3 ರ ರಾತ್ರಿ ಮೆ. ಪಿ. ಐ. ಬೆಳ್ಯಪ್ಪನವರು ಸದರಿ ದೇವಸ್ಥಾನಕ್ಕೆ ಹೋಗಿ, ಮಹಾತ್ಮರೇ ಉಪವಾಸವನ್ನು ಬಾಕಿ ಮಾಡಿರಿವಾಗ್ಯೆ ಅವರ ಅಪ್ಪಣೆ ಇಲ್ಲದೆ ಬೇರೆಯವರು ಉಪವಾಸವನ್ನು ಕೈಕೊಳ್ಳುವದು ನ್ಯಾಯವಲ್ಲವೆಂದು ಮಂದಟ್ಟು ಮಾಡಿದ ಮೇಲೆ 2 ದಿವಸ ಆಹಾರ ತೆಗೆದುಕೊಳ್ಳದೆ ಇದ್ದ ಮೆ. ಅಚ್ಚಯ್ಯನವರು ಉಪವಾಸವನ್ನು ಬಿಟ್ಟು ಮರುದಿನ ಅವರ ಊರಿಗೆ ಹೊರಟು ಹೋದರು.

ಹಿಂದೂದೇಶ.

ತಾ. 1ರಲ್ಲಿ ಅಲಹಾಬಾದಿನಲ್ಲಿ ಹಸ್ತ ಪತ್ರ ಹಂಚುತಿದ್ದಾಗ್ಗೆ ನಾಲ್ಕು ಸ್ವಯಂ ಸೇವಕರು ಕೈದು ಮಾಡಲ್ಪಟ್ಟರು

ಈ ತಾ. 4ರಲ್ಲಿ ಸಿಂಧ್ ಕಾಂಗ್ರೆಸ್ ಕಮಿಟಿಯ ಮೆಂಬರುಗಳು ಕರಾಚಿಯಲ್ಲಿ ಏಟಿಂಗು ಮಾಡಿ, ನೊರವಣಿಗೆ ಹೊರಟಾಗ್ಗೆ 5 ಮೆಂಬರುಗಳು ಕೈದು ಮಾಡಲ್ಪಟ್ಟರು.

ಕಾಂಗ್ರೆಸ್ಸಿನ ಈಗಿನ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರನ್ನು ನೋಡಲು ಪಾಟ್ನಾಕ್ಕೆ ಹೋಗಿದ್ದ ಪ್ರೊಫೆಸರ್ ಕಿರ್ಪಾನಿಯವರನ್ನು ತಾ. 4ರಲ್ಲಿ ಪೊಲೀಸಿನವರು ರೈಲ್ವೆ ಸ್ಟೇಷನಿನಲ್ಲಿ ಕೈದು ಮಾಡಿದರು.

ಸತ್ಯಾಗ್ರಹ ಚಳವಳದ ವಾರ್ಷಿಕ ವರ್ದಂತಿಯನ್ನು ಈ ತಾ. 4 ರಲ್ಲಿ ನಡಿಸುತ್ತಿದ್ದಾಗ್ಯೆ ಪಾಟ್ನಾದಲ್ಲಿ 24 ಜನರು ಕೈದು ಮಾಡಲ್ಪಟ್ಟರು. ಈ ದಿನ ಕಲ್ಕತ್ತಾ ಬೊಂಬಾಯಿ ಮುಂತಾದ ಪಟ್ಟಣಗಳಲ್ಲಿ ಹರಿತಾಳವು ಆಚರಿಸಲ್ಪಟ್ಟಿತು.

ಒಂಗಾಳದ ಸಮುಸ್ಯೆಯನ್ನು ತೀರ್ಮಾನಿಸಲು ಅಲ್ಲಿಹಿಂದಾದು ಬಗ್ಗಟ್ಟಿನ ಕಾನ್‌ಫರೆನ್ಸಿನ ಉಪಕಮಿಟಿಯವರು ಕಲ್ಕತ್ತಾದಲ್ಲಿ ಕೆಲವು ದಿವಸಗಳ ವರೆಗೆ ಏಟಿಂಗು ನಡಿಸಿದರು. ಯಾವ ತೀರ್ಮಾನಕ್ಕೆ ಬಾರದ್ದರಿಂದ ಏಟಿಂಗನ್ನು ಫೆಬ್ರವರಿ 4 ಕ್ಕೆ ಮುಂದರಿಸಿಟ್ಟಿರುವರು.

ಕಲ್ಕತ್ತಾದಲ್ಲಿ ವಾಟ್ಸನ್ ಕೊಲೆ ಕೇಸಿನ ಸಂಬಂಧ ದಸ್ತಗಿರಿ ಮಾಡಲ್ಪಟ್ಟಿದ್ದ ಎಸ್. ಇಂಪುಸೂದನ ಘೋಸ್ ಮತ್ತು ನಾಲ್ವರು ಈ ತಾ. 30ಲ್ಲಿ ಬಿಡಲ್ಪಟ್ಟರು. ಆದರೆ ಕೂಡಲೆ ಅವರು ಐವರೂ ರಾಜಕೀಯ ತಕ್ಸೀರಿನ ಮೇಲೆ ಪುನಹ ಕೈದು ಮಾಡಲ್ಪಟ್ಟರು.

ಕಲ್ಕತ್ತಾದಲ್ಲಿ ಸತ್ಯಾಗ್ರಹ ಚಳವಳದಲ್ಲಿ ಭಾಗಿಗಳಾದದ್ದಕ್ಕಾಗಿ ಈ ತಾ. 4ರಲ್ಲಿ ಹೌರಾದ ಮೇಜಿಸ್ಟ್ರೇಟರು 14 ಯುವಕರಿಗೆ 4 ತಿಂಗಳುಗಳಿಂದ 4 ವಾರಗಳ ವರೆಗೂ, ಕಾಂಗ್ರೆಸ್ ಚಳವಳಕ್ಕೆ ಸಹಾಯ ಮಾಡಿದರೆಂದು 11 ಜನರಿಗೆ ಎರಡೆರಡು ತಿಂಗಳೂ ಕಠಿಣ ಸಜೆ ವಿಧಿಸಲಾಯಿತು.

ಬೊಂಬಾಯಿಯ ಬ್ಯಾರಿಸ್ಟರ್ ಪೆರೋಜ್ ರುಸ್ತುಮ್ಜಿ ಎಂಬವರು ಕಾಂಗ್ರೆಸ್ಸಿನ ಹಸ್ತ ಪತ್ರಿಕೆಗಳನ್ನು ತಯಾರಿಸಲು ಸಹಾಯಮಾಡುತ್ತಿದ್ದಾರೆಂಬ ಸಂಶಯದಿಂದ ತಾ. 3 ರಲ್ಲಿ ಅವರ ಮನೆ ಜಡ್ತಿಮಾಡಿ ಅವರನ್ನೂ, ಆ ಸಮಯದಲ್ಲಿ ಅಲ್ಲಿಗೆ ಬಂದ ಬೇರೆ ಇಬ್ಬರನ್ನೂ ದಸ್ತಗಿರಿಮಾಡಿದರು.

ಮದ್ರಾಸು 'ಪೆನಿಟೆನ್ಶ್ಯರಿ' ಜೈಲಿನಲ್ಲಿ ರಾಜಕೀಯ ಕೈದಿಗಳ ಉಪಚಾರವು ಬಹು ಹೀನವಾಗಿರುವುದನ್ನು ಉತ್ತಮಗೊಳಿಸುವದಕ್ಕಾಗಿ ಏಳಾಂಡುರಂಗಂ ಎಂಬ ಕೈದಿಯು ಎರಡು ವಾರ ಉಪವಾಸ ಮಾಡುತಿದ್ದು ತಾ. 4ರಲ್ಲಿ ಮೆ. ಟಿ. ಪ್ರಕಾಶಂರವರ ಮಾತು ಮೇರೆ ಈಗ ಆಹಾರ ತೆಗೆದುಕೊಳ್ಳಲು ಪ್ರಾರಂಭಿಸಿರುವರು.

ಮಹಾತ್ಮ ಗಾಂಧಿಯವರ ದಸ್ತಗಿರಿಯ ವಾರ್ಷಿಕ ವರ್ದಂತಿಯನ್ನು ಈ ತಾ. 4ರಲ್ಲಿ ಆಚರಿಸಿದಾಗ್ಯೆ ಬೊಂಬಾಯಿಯಲ್ಲಿ ಮೂವರೂ, ಮದ್ರಾಸಿನಲ್ಲಿ ಮೂವರೂ ಕೈದು ಮಾಡಲ್ಪಟ್ಟರು. ಮದುರಾಡಲ್ಲಿ ಪೂರ್ತಿ ಹರಿತಾಳವು ಆಯಿತು. ಅಲ್ಲಿಯ ಸ್ವಯಂ ಸೇವಕರ ಮೇಲೆ ಲಾಠಿ ಪ್ರಯೋಗವೂ ಆಯಿತಂತೆ.

ಕಳೆದ ತಾ. 24ರಲ್ಲಿ ದರ್ಭಾಂಗ ಜಿಲ್ಲೆಯ ಒಂದು ಗ್ರಾಮದಲ್ಲಿರುವ ಒಬ್ಬ ದೊಡ್ಡ ಜಮೀನ್ದಾರನ ಮನೆಯೊಳಗೆ ಕಳ್ಳರು ನುಗ್ಗಿ 42,000 ರೂ. ಮತ್ತು ಬೆಲೆಯಳ್ಳ ಆಭರಣಗಳನ್ನು ದೋಚಿಕೊಂಡು ಹೋದರು. ಮೂರು ಕಾರುಗಳಲ್ಲಿ ಬಂದ ಈ ಕಳ್ಳರು ಮೊದಲು ಈ ಜಮೀನ್ದಾರನ ಮೇಲೆ ಕೈಮಾಡಿ ನಂತರ ಕದ್ದರಂತೆ.

ಕೃತಿಕಾ ಏಕಾದಶಿ ದಿನ ಗುರುವಾಯೂರು ದೇವಸ್ಥಾನಕ್ಕೆ ಹರಿಜನರನ್ನೂ ಬಿಡುವದುಂಟು. ಆದರೆ ಮರುದಿನ ಶುದ್ಧ ಮಾಡುತ್ತಾರೆ. ಅಸ್ಪೃಶ್ಯರಿಗೂ, ಅವರೊಂದಿಗೆ ಹೋಗಲು ಆಕ್ಷೇಪಣೆ ಇಲ್ಲದವರಿಗೂ ಈ ದೇವಸ್ಥಾನದ ಪ್ರವೇಶಕ್ಕೆ ದಿನದ ಒಂದು ಭಾಗವನ್ನೂ, ಹಾಗೆ ಆಕ್ಷೇಪಿಸುವ ಸನಾತನಿಗಳಿಗೆ ದಿನದ ಇನ್ನೊಂದು ಭಾಗವನ್ನೂ ನಿಶ್ಚಯಿಸಬಹುದೆಂದು ಮಹಾತ್ಮ ಗಾಂಧಿಯವರು ಜಾಮೊರಿನ್ನರಿಗೆ ಸೂಚಿಸಿರುವರಂತೆ. ಇದು ಎಂಡ. ಕಡೆಯವರಿಗೆ ರಾಜಿಯ ಸಂಜನೆ. ಜಾಮೊರಿನ್ನರು ಉತ್ತರ ಕೊಟ್ಟಿರುವುದಿಲ್ಲ.

ವಿದೇಶ.

ರಷ್ಯಾದಲ್ಲಿ 1938 ರೊಳಗೆ ಯಾವ ಮತವೂ ಇಲ್ಲದಂತೆ ಮಾಡಲು ನಡಿಸುತ್ತಿರುವ "ದೇವಾಲ್ಲ" ಎಂಬ ಚಳವಳಕ್ಕೆ ವಿರೋಧವಾಗಿ ಕೆಲಸ ಮಾಡಿದಕ್ಕಾಗಿ ಅಲ್ಲಿಯ ಒಬ್ಬ ಗ್ರಾಸ್ ಬಿಷಪ್ಪರಿಗೆ ಆರು ವರ್ಷ ಸಜೆಯೂ, 5 ವರ್ಷ ಗಡೀವಾರೂ ವಿಧಿಸಲಾಗಿದೆ.

ಏರ್ಲೇಂಡಿನ ಪಾರ್ಲಿಮೆಂಟು ಈ ತಾ. 31 ಮಧ್ಯ ರಾತ್ರಿ ಘಕ್ಕನೆ ಅಂತ್ಯಗೊಳಿಸಲ್ಪಟ್ಟಿತು. ಹೊಸ ಜುನಾವಣೆಯು ಈ ತಾ. 24ರಲ್ಲಿ ನಡೆಯುವುದು. ಲೇಬರ್ ಪಾರ್ಟಿಯವರು ಡಿ ವೇಲೆರಾರವರ ಸರ್ಕಾರಕ್ಕೆ ವಿರೋಧಿಸಿದ್ದರಿಂದಲೇ ಈ ವರ್ತನಕ್ಕೆ ಕಾರಣವಂತೆ.

ಜೈನಾದ ಶಾನ್ಹೈಕುವಾನ್ ಎಂಬ ಪಟ್ಟಣವನ್ನು ಜಪಾನಿನ ಸೈನಿಕರು ಕೈವಶಮಾಡಿಕೊಂಡಿರುವರು. ಈ ಪ್ರಯತ್ನದಲ್ಲಿ 5000 ಜಪಾನ್ ಸಿಪಾಯಿಗಳು 8 ಯುದ್ಧ ಹಡಗುಗಳ ಸಹಾಯದಿಂದ ಸದರಿ ಪಟ್ಟಣದಲ್ಲಿದ್ದ 500 ಚೈನೀ ಸಿಪಾಯಿಗಳನ್ನು ಕೊಂದು ಪಟ್ಟಣವನ್ನು ಸೆಲಸಮಮಾಡಿದರಂತೆ. ಯುದ್ಧವು ಪ್ರಬಲವಾಗುವ ಸಂಭವನವಿದೆಯೆಂದು ಅಲ್ಲಿಯ ಪತ್ರಿಕೆಗಳ ಅಭಿಪ್ರಾಯ.

"ಕೊಡಗು" ಕಂಪೆನಿಯು ಲೆಖ್ಖಿದ ತಿದ್ದುಪಡಿ.

ಕಳೆದ ನವಂಬರು ತಾ. 26 ರಲ್ಲಿ ನಡೆದ ಜನರಲ್ ಏಟಿಂಗಿನ ತೀರ್ಮಾನದಂತೆ ಈ ಕೆಳಗಿನ ತಿದ್ದುಪಡಿಯು ಪ್ರಕಟಿಸಲಾಗಿದೆ.

1931—32 ನೇ ವರ್ಷದ "ಕೊಡಗು" ಲಿಮಿಟೆಡ್ ಕಂಪೆನಿಯ 10 ನೇ ವಾರ್ಷಿಕ ವರದಿಯ 9ನೇ ಪುಟದಲ್ಲಿ 4ನೇ ಐಟಮ್ಮಿನ 'ಹಿಂದಿನ ಬಾಕಿ, ಹಾಗೆಯೆ: ಅದರ ಜುಮ್ಮವೂ' 1162—14—11 ಎಂಬುದರ ಬದಲು 1162—14—10 ಆಗತಕ್ಕದ್ದು. 10ನೇ ಪುಟದಲ್ಲಿ 10ನೇ ಐಟಮ್ಮಿನ ಜುಮ್ಮವು 4894—15—7 ಎಂಬುದರ ಬದಲು 4902—6—7 ಆಗತಕ್ಕದ್ದು. ಇವೆರಡೂ ಪ್ರಿಂಟಿಂಗಿನಲ್ಲಿ ತಪ್ಪಾದದ್ದಾಗಿದೆ; ಲೆಖ್ಖದಲ್ಲಿ ತಪ್ಪಿಲ್ಲ.

ಮಡಿಕೇರಿ, ತಾ. 31—12—32.

ಸಿ. ಎನ್. ವೆಂಕಪ್ಪಯ್ಯ, (ಕಾರ್ಯಾಧ್ಯಕ್ಷ)

ಸೆಂಟ್ರಲ್ ಬ್ಯಾಂಕು ವಿಶೇಷ ಮಿಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ವಿಶೇಷ ಮಿಟಿಂಗು ತಾರೀಕು 24—12—32ರಲ್ಲು ಬ್ಯಾಂಕಿನ ಆಫೀಸಿನಲ್ಲಿ ನಡೆಯಿತು ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು. (1) ರಾ. ಬಾ. ಪಿ. ದೇವಯ್ಯನವರು, (ಪ್ರೆಸಿಡೆಂಟರು) ಮೆ. ಗಳಾದ (2) ಯಂ. ಯಂ. ಬೆಳ್ಯಪ್ಪನವರು, (3) ಪಿ. ಎ. ಚಂಗಪ್ಪನವರು, (4) ಯನ್. ಬಿ. ಸೋಮಯ್ಯನವರು, (5) ಪಿ. ಜಿ. ಮುದ್ದಯ್ಯನವರು, (6) ಎಸ್. ಎನ್. ರಾವ್‌ಶೆಟ್ಟಿ, (7) ಪುಚ್ಚಿಮಾಡ ಮೊದಯ್ಯನವರು (8) ಮತ್ತು ಕೋಡಿರ ತಮ್ಮಯ್ಯನವರು.

1. ಕಳೆದ ಮಿಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಕಳೆದ ನವಂಬರ್ ತಿಂಗಳ ಜಮಾ ವೆಚ್ಚ ಖರ್ಚಿನ ಲೆಕ್ಕ ಓದಿ ಪಾಸುಮಾಡಲಾಯಿತು.

ಹಿಂದಿನ ಬಾಕಿ	ರೂ.	10873	5 4
ನವಂಬರ್ ತಿಂಗಳಲ್ಲಿ ವಸೂಲಿ	,,	20199	8 0
ಜುಮ್ಲ	,,	31072	13 11
ನವಂಬರ್ ತಿಂಗಳಲ್ಲು ಖರ್ಚು	,,	27447	1 0
ಶಿಲ್ಕು	,,	3625	12 11

3 ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು (1) ಅಮ್ಮತ್ತಿ ಟೌನ್ ಸೊಸೈಟಿಗೆ ರೂ. 1500, ಮತ್ತು (2) ಪೊನ್ನಂಪೇಟೆ ಟೌನ್ ಸೊಸೈಟಿಗೆ ರೂ. 2000

4. ಗೋಣಿಕೊಪ್ಪಲು ಟೌನ್ ಸೊಸೈಟಿಯು ಸೆಂಟ್ರಲ್ ಬ್ಯಾಂಕಿಗೆ ವಾಯಿದೆ ಏರಿದ ಸಾಲ ಮರುವಾವತಿಗೆ ಬಾಕಿ ಇರುವುದರಿಂದ ಸದರಿ ಹೊಬಲಗು ವಾವತಿ ಮಾಡಿದ ವಿನಹ ಸದರಿ ಸೊಸೈಟಿಯು ಸಾಲವ ಅರ್ಜಿ ಮೇರೆ ಸಾಲ ವಂ ಜೂರ್ಮಾಡಲು ಆಗುವುದಿಲ್ಲವಾಗಿ ತೀರ್ಮಾನವಾಯಿತು.

5. ಬ್ಯಾಂಕಿನ 1931—32ನೇ ಸಂವತ್ಸರದ ಜನರಲ್ ವಿಟಿಂಗನ್ನು ತಾ. 26—2—1933ನೇ ಆದಿತ್ಯವಾರ ಮಧ್ಯಾಹ್ನ 1 ಗಂಟೆಗೆ ಮಡಿಕೇರಿಯಲ್ಲು ಜರುಗಿಸುವಂತೆಯೂ, ವಿಟಿಂಗಿಗೆ ಬರುವ ಡೆಲಿಗೇಟರುಗಳಿಗೆ ಕಾಮನ್‌ಗುಡ್ ಫಂಡಿನ ಹಣದಿಂದ 150 ರೂಪಾಯಿಗೆ ವಿರದೆ ತಿಂಡಿ, ತೀರ್ಥಗಳಿಗೆ ಖರ್ಚು ಮಾಡುವಂತೆಯೂ ತೀರ್ಮಾನವಾಯಿತು.

6 ಮೆ. ಸಿ. ಯನ್. ವೆಂಕಪ್ಪಯ್ಯ ಬಿ. ಎ. ಬಿ. ಯಲ್. ರವರು ಬ್ಯಾಂಕಿನ ಗೌರವ ಕಾರ್ಯದರ್ಶಿತನಕ್ಕೂ (ಸೆಕ್ರೆಟರಿ) ಮತ್ತು ಡೈರೆಕ್ಟರುತನಕ್ಕೂ ಬರಕೊಂಡ ರಾಜಿನಾಮೆ ಪತ್ರವನ್ನು ಓದಲಾಯಿತು.

ಡೈರೆಕ್ಟರುಗಳು ವಿಷಾದಪೂರ್ವಕವಾಗಿ ಇವರ ರಾಜಿನಾಮೆಯನ್ನು ಮಂಜೂರು ಮಾಡಿ ಇವರು ಈ ಬ್ಯಾಂಕು ಸ್ಥಾಪನೆಯಾದ ಆಗಾಯಿತಿನಿಂದ ಬ್ಯಾಂಕಿನ ಗೌರವ ಕಾರ್ಯದರ್ಶಿಯಾಗಿ ಮಾಡಿದ ಒಳ್ಳೇ ಕೆಲಸಗಳನ್ನು ರಿಕಾರ್ಡು ಮಾಡ ಬೇಕಂತ ತೀರ್ಮಾನವಾಯಿತು.

7 ಬ್ಯಾಂಕಿನ ಗೌರವ ಸೆಕ್ರೆಟರಿಯವರು ಮಾಡುವ ಮಾಮೂಲ್ ಕೆಲಸಗಳನ್ನು ಇನ್ನೊಂದು ಜನರಲ್ ವಿಟಿಂಗಿನ ವರೆಗೆ ಶಸ್ನ ಟೈಪಿಂಗ್ ಕೆಲಸದ ಜೊತೆಗೆ ಗೌರವ ಸೆಕ್ರೆಟರಿ ಕೆಲಸ ಸಹ ಮಾಡಬೇಕಂತ ಮೆ. ಮನೆಯಪಂಡ ಬೆಳ್ಯಪ್ಪನವರನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು. ಸದರಿಯವರು ಒಪ್ಪಿಕೊಂಡರು.

8 ಬ್ಯಾಂಕಿನ ಖಾಯಂ ಸಿಬ್ಬಂದಿಯವರಿಗೆ ಪ್ರಾವಿಡೆಂಟ್ ಫಂಡು ಏರ್ಪಾಡು ಮಾಡುವ ಬಾಬಿನಲ್ಲಿ ಸಬ್ ಕಮಿಟಿಯು ವರು ತಯಾರಿಸಿದ ಕರಡು ರೂಲ್ಸನ್ನು ಮಂಜೂರು ಮಾಡಿ 1933ನೇ ಇಸವಿ ಜನವರಿ ತಾ. 1ರಿಂದ ಅದನ್ನು ಜಾರಿಗೆ ತರ ಬೇಕಂತ ತೀರ್ಮಾನವಾಯಿತು.

9. ಮೆ. ಇಜೆಟ್ಟಿರ ಸಿ. ಸುಬ್ಬಯ್ಯ ಯಂ. ಎ. ಬಿ. ಯಲ್. ರವರು ಬ್ಯಾಂಕಿನ ಡೈರೆಕ್ಟರುತನಕ್ಕೆ ಕೊಟ್ಟ ರಾಜಿನಾಮೆ ಪತ್ರವನ್ನು ಓದಲಾಯಿತು.

ಅವರ ರಾಜಿನಾಮೆಯನ್ನು ಮಂಜೂರು ಮಾಡಿ ಅವರು ಡೈರೆಕ್ಟರು ಆಗಿದ್ದಾಗ ಬ್ಯಾಂಕಿನಲ್ಲಿ ಮಾಡಿದ ಒಳ್ಳೇ ಕೆಲಸವನ್ನು ರಿಕಾರ್ಡು ಮಾಡಬೇಕಂತ ತೀರ್ಮಾನವಾಯಿತು.

10. ಮೆ. ಸಿ. ಯನ್. ವೆಂಕಪ್ಪಯ್ಯನವರ ಮತ್ತು ಐಜಟ್ಟಿರ ಸಿ. ಸುಬ್ಬಯ್ಯನವರ ಬದಲು ಮೆ. ಯಸ್. ಬಸಪ್ಪನವರು ಮತ್ತು ಮೆ. ಕೂಡಂದೇರ ಸಿ. ದೇವಯ್ಯನವರನ್ನು ಸಹ ಡೈರೆಕ್ಟರುಗಳನ್ನಾಗಿ ಆರಿಸಲಾಯಿತು.

11. ವೀರಾಜಪೇಟೆ ಲಾಯರಾದ ಮೆ. ಯಸ್. ಯಸ್. ರಾಮಮೂರ್ತಿ ಬಿ. ಎ. ಬಿ. ಯಲ್. ರವರು ತನ್ನ ತಂದೆ ಲೇಟ್ ಶಂಕರನಾರಾಣಯ್ಯನವರ ಹೆಸರಿನಲ್ಲಿ ಬ್ಯಾಂಕಿನಲ್ಲಿ ಜವಾಬ್ದಾರಿಟ್ಟು ಇಟ್ಟಿರುವ ಹಣವನ್ನು ತನ್ನ ಹೆಸರಿಗೆ ವರ್ಗಾಯಿಸ ಬೇಕಾಗಿ ಬರಕೊಂಡ ಪತ್ರವನ್ನು ಓದಲಾಯಿತು.

ಈ ಬಾಬಿನಲ್ಲಿ ಲೇಟ್ ಶಂಕರನಾರಾಯಣಯ್ಯನವರ ಹೆಂಡತಿ ಮತ್ತು ಪ್ರಾಯಸ್ಥರಿಬ್ಬರಿಗೆ ಒಂದು ಮಕ್ಕಳ ಒಟ್ಟಿಗೆ ತೆಗೆದುಕೊಳ್ಳಬೇಕಂತ ತೀರ್ಮಾನವಾಯಿತು.

ಪ್ರೊವಿನ್ಶಿಯಲ್ ಕೋ-ಆಪರೇಟಿವ್ ಫೆಡರೇಶನ್ ಪ್ರೆಸಿಡೆಂಟರು ಬ್ಯಾಂಕಿನ ಬೈಲಾ ನಂಬರು 31 (b) ಯ ಪ್ರಕಾರ ಸೊಸೈಟಿಗಳ ಮೇಲ್ವಿಚಾರಣೆ ವಿಷಯ ಬರಕೊಂಡ ಪತ್ರ ಓದಲಾಯಿತು.

ಫೆಡರೇಶನ್ನಿನ ಬೈಲಾ ನಂಬರು 8 ಪ್ರಕಾರ ಸೆಕ್ರೆಟರಿಗಳ ಮೇಲ್ವಿಚಾರಣೆ ತೆಗೆದುಕೊಳ್ಳುವಂತೆ ಒಪ್ಪಿಸಲಾಯಿತು.

12. ಪೊಡನಾಲ್ಕನಾಡು ಕೋ-ಆಪರೇಟಿವ್ ಸೆಕ್ರೆಟರಿಯವರು ತಮ್ಮ ಬಾಬ್ತು ಸೆಂಟ್ರಲ್ ಬ್ಯಾಂಕಿಗೆ ವಾವತಿ ಮಾಡಲು ಬಾಕಿ ಇರುವ ವಾಯಿದೆ ಏರಿದ ಸಾಲಕ್ಕೆ ಬರುವ ಫೆಬ್ರವರಿ ಆಖೈರು ವರೆಗೆ ವಾಯಿದೆ ಕೊಡಬೇಕಾಗಿ ಬರಕೊಂಡ ಅರ್ಜಿ ಓದಲಾಯಿತು.

ಈ ಬಾಬಿನಲ್ಲಿ ವಾಯಿದೆ ಕೊಡಲು ಆಗುವುದಿಲ್ಲವೆಂತ ತೀರ್ಮಾನವಾಯಿತು.

14. ವಾಯಿದೆ ಏರಿದ ಸೊಸೈಟಿಗಳ ರೂ. 30737—1—0 ಹಣದ ಬಾಕಿ ಪಟ್ಟಿಯನ್ನು ಓದಲಾಯಿತು.

ಬ್ಯಾಂಕಿಗೆ 1929—30, 1930—31ನೇ ವರ್ಷಗಳಲ್ಲು ವಾವತಿ ಮಾಡಲು ಬಾಕಿ ಇರುವ ವಾಯಿದೆ ಏರಿದ ಸಾಲಗಳನ್ನು ಇನ್ನೂ ವಾವತಿ ಮಾಡದ ಸೊಸೈಟಿಗಳಿಗೆ ವಡನೆ ಸಾಲ ಮರುವಾವತಿ ಮಾಡಬೇಕಾಗಿಯೂ, ಇಲ್ಲವಾದರೆ ವಸೂಲಾತಿಗೆ ಕಕ್ಕ ಕ್ರಮ ತೆಗೆದುಕೊಳ್ಳಲಾದೀತಾಗಿಯೂ ರಿಜಿಸ್ಟರ್ ನೋಟಿಸು ಕೊಡುವಂತೆ ತೀರ್ಮಾನವಾಯಿತು.

ಮಡಿಕೇರಿ. ಪಿ. ದೇವಯ್ಯ,
ತಾ. 24—12—32. (ಅಧ್ಯಕ್ಷರು)

ಸತ್ಪ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಪೊನ್ನಂಪೇಟೆಯು ನಾಯಿಯು ಬಾಲದಂತಾಯಿತೇ ?

ಅಯ್ಯಾ,

ಹುತ್ತರಿ ಕಳೆದು ಊರೊರ್ಮೆಯನ್ನು ನಡಿಸುವ ಪದ್ಧತಿಯು ಪೊನ್ನಂಪೇಟೆಯಲ್ಲಿ ಈ ವರೆಗೆ ಇರಲಿಲ್ಲ. ಆದರೆ ಈ ವರ್ಷ ಮುಖ್ಯವಾಗಿ ಅಲ್ಲಿ ಉದ್ಯೋಗಸ್ಥರು ಮತ್ತು ಕೆಲವು ಉದ್ಯೋಗಸ್ಥರಲ್ಲದವರು ಸೇರಿ ಕೆಲವು ದಿವಸಗಳ ಹಿಂದೆ ಊರೊರ್ಮೆಯನ್ನು ನಡಿಸಿದರು. ಇದೇನೂ ವಿಶೇಷದ ಸಂಗತಿಯಲ್ಲ. ಆದರೆ ನಿವಾದೇಪಗೆ ಅಲ್ಲಿ ಅವಕಾಶವೊದಗಿದ್ದೇ ನ್ಯಸನದ ಮತ್ತು ವಿಶೇಷದ ವಿಷಯವಾಗಿದೆ. ಕೊಡಗಿನಲ್ಲಿ ಸ್ವಭಾವತಃ ಸಾರಾಯಿ ಅಂಗಡಿ ಪಿಕೆಟಿಂಗ್ ಪ್ರಾರಂಭವಾದ್ದೇ ಈ ಪಟ್ಟಣದಲ್ಲಿ. ಅದರ ಫಲಿತಾಂಶವು ಬಹು ಜೆನ್ನಾಗಿ ಆಯಿತು. ಕುಡಿಕತನವು ಬಹು ಕಡಿಮೆಯಾಯಿತು. ಗೋಣಿಕೊಪ್ಪಲು ಗಡುಗದಲ್ಲಿ ಈ ವರ್ಷ ಹುತ್ತರಿಗೆ 5 ಗ್ಯಾಲನ್ನಿಗಿಂತ ಹೆಚ್ಚು ಸಾರಾಯಿ ಖರ್ಚಾಗಲಿಲ್ಲವಂತೆ. ಹಾಗಾದರೆ ಪೊನ್ನಂಪೇಟೆಯವರಿಗೆ ಹೊಸ ಗಾಳಿಯು ಯಾವಾಗ ಬೀಸಿದ್ದು ? ಪಿಕೆಟಿಂಗ್ ಇಲ್ಲವೆಂದ ಮಾತ್ರಕ್ಕೆ ಅಲ್ಲಿಯವರು ಕೊಳವಿ ತೆಗೆದ ನಾಯಿಯ ಬಾಲದಂತಾದರೇ ? ಇನ್ನಾದರೂ ಇಂಥಾ ದುಃಖಕರವಾದ ಕಾರ್ಯವನ್ನು ಮಾಡಲಾರರಾಗಿ ಆಶಿಸುವ,

"ಹಳ್ಳಿಯವ"

ಕೊಡಗಿನ ಪಟೇಲರುಗಳ ಸ್ಥಿತಿ.

ಅಯ್ಯಾ,

ಕೊಡಗು ದೇಶದ ಪಟೇಲರುಗಳ ಗೋಳನ್ನು ಕೇಳುವವರೇ ಇಲ್ಲ. ಇವರ ವಿಷಯವಾಗಿ ಈ ಕೆಳಗೆ ಕೆಲವು ಸಂಗತಿಗಳನ್ನು ವಿವರಿಸಬೇಕಾಗಿದೆ, ಪಟೇಲನ ಕೆಲಸವೆಂದರೆ ಗೌರವದ ಕೆಲಸವೆಂದು ಎಲ್ಲರೂ ಹೇಳುವ ಮಾತು ಸಹಜವೇ ಸರಿ. ಇದು ಕೆಲವು ವರ್ಷಗಳಿಗೆ ಹಿಂದೆಯಾಯಿತು, ಈಗಲೋ ಅ ಗೌರವದ ಕೆಲಸವಾಗಿ ಕಾಣುತ್ತದೆ. ಹೇಗಂದರೆ:—ಯಾವ ನೋಟೀಸು ಒಂದರೂ ಪಟೇಲರ ಕೈಗೆ ಕೊಟ್ಟು ಗ್ರಾಮದಲ್ಲಿರುವ ಮನೆ ಮನೆಗೆ ಕೊಡುವಂತೆ ಹೇಳುವರು. ಗ್ರಾಮಕ್ಕೆ ಯಾವ ಕೆಲಸದವರು ಬಂದರೆ ಅವರ ಸಂಗಡ ಗ್ರಾಮದಲ್ಲಿ ತಿರುಗಬೇಕು. ಇವನಿಗೆ ಇವನ ಕೆಲಸವನ್ನು ಮಾಡಲು ಸರಿಯಾಗಿ ಸಮಯವೇ ಸಿಕ್ಕದು. ಕೆಲವು ಕಡೆಗಳಲ್ಲಿ ವೆಂಡರಿಗಿಂತಲೂ ಇವರ ಗೌರವಾರ್ಥವಾಗಿ ಕೊಡುವ ಯೆಲೋವೆನ್ಸ್ ಕಮ್ಮಿಯಾಗಿರುತ್ತೆ. ಹೀಗೆ ಸಿಕ್ಕುವ ಅಲ್ಪ ಸ್ವಲ್ಪ ಸಂಬಳದಿಂದ ಇವನ ಖರ್ಚನ್ನು ಹೇಗೆ ತಾನೆ ನಿವಾರಿಸಿಕೊಳ್ಳಬಹುದು. 9—12—32 ರಲ್ಲು ನಡೆದ ಸಂಟಿಕೊಪ್ಪ ನಾಡಿನ ಜನಾಬಂದಿಯಲ್ಲಿ ಜನಾಬಂದಿ ಆಫೀಸರಿಗೆ ನಾಡಿನ ಕೆಲವು ಪಟೇಲರು ಸೇರಿ ತಮ್ಮ ಕಷ್ಟವನ್ನು ವಿವರಿಸಿ ಒಂದು ಅರ್ಜಿಯನ್ನು ಕೊಟ್ಟಿವು. ಯೆಲೋವೆನ್ಸಿನ ಸಂಗತಿ ವಿವರಿಸಿವು. ಇದಕ್ಕೆ ನ್ಯಾಯವಾದ ಜವಾಬು ಸಿಕ್ಕಲಿಲ್ಲ. ಮೊದಲು ಎರಡು ಗ್ರಾಮವನ್ನು ಒಬ್ಬನೇ ನೋಡುತ್ತಿದ್ದರಿಂದ ಹೆಚ್ಚಿಗೆ ಯೆಲೋವೆನ್ಸ್ ಸಿಕ್ಕುತ್ತಿತ್ತು. ಈಗ ಎರಡನ್ನು ಒಂದು ಮಾಡಿದ್ದರಿಂದ ಕಮ್ಮಿಯಾಯಿತಂತೆ. ಹಾಗಾದರೆ ಮೊದಲಿನಂತೆಯೇ ಗ್ರಾಮವನ್ನೆಲ್ಲ ಸುತ್ತಬೇಡವೇ ? ಮೊದಲು ಎರಡು ಗ್ರಾಮವನ್ನು ನೋಡುತ್ತಿದ್ದವರಿಗೆ ವರ್ಷ ಒಂದರ 80 ರೂ. ಯಿಂದ 100 ರೂ. ಗಳ ವರೆಗೆ ಸಂಬಳ ಇತ್ತು. ಇವರ ಖರ್ಚನ್ನು ಇದರಿಂದಲೇ ಕಳೆದುಕೊಂಡು ಹೋಗುತ್ತಿದ್ದರು. ಈಗಿನಷ್ಟು ಕೆಲಸವು ಸಹ ಇರಲಿಲ್ಲ. ಈಗಲೋ ಕೆಲಸವು ಹೊಲಾರದಷ್ಟು; ಯೆಲೋವೆನ್ಸ್ 54 ರೂ. ಮಾತ್ರ. ಹಾಗಾದರೆ ಇವರು ಪಾಡೇನಾಗಬೇಕು. ಈಗ ಇರುವುದಕ್ಕಿಂತಲೂ ಹೀನ ಸ್ಥಿತಿಗೆ ಇಳಿಯಬೇಕು. ಇನ್ನು ಕಂದಾಯವು ಬಂತು. ಇವರ ಗೋಳು ದೇವರೇ ಬಲ್ಲ. ಇವರ ಕೆಲಸ ಮಾಡುವುದೋ ? ಕಂದಾಯ ವಸೂಲು ಮಾಡುವುದೋ ? ತಿಳಿಯದು.

ಕೆಲವು ಸಂಗತಿಗಳನ್ನು ಮಾತ್ರ ಇಲ್ಲಿ ವಿವರಿಸಿದ್ದಾಗಿರುತ್ತೆ. ಇಂಥಾದ್ದು ಇನ್ನು ಅನೇಕವಿವೆ. ಈ ಕಷ್ಟಗಳನ್ನು ನಿವಾರಿಸಲು ಕೌನ್ಸಿಲು ಮೆಂಬರುಗಳೂ ಘನ ಸರಕಾರದವರೂ ಚಿತ್ತಕ್ಕೈತರಬೇಕಾಗಿ ಬೇಡುತ್ತೇನೆ.

ಕೆ. ಎ. ಯಂ.

ಡಿಸ್ಟ್ರಿಕ್ಟ್ ಬೋರ್ಡು ನಾನ್ ಆಫಿಷಿಯಲ್ ಪ್ರೆಸಿಡೆಂಟ್ ನೇಮಕ.

ಅಯ್ಯಾ,

ಬಹಳ ವರ್ಷಗಳಿಂದ, ಡಿಸ್ಟ್ರಿಕ್ಟ್ ಬೋರ್ಡು ಆಡಳಿತೆಯನ್ನು, ದೇಶದ ಜನಗಳಿಂದ ಚುನಾಯಿತರಾದ ಮೆಂಬರುಗಳಿಗೆ ಬಿಟ್ಟುಕೊಡಬೇಕೆಂದೂ, ಈ ಮೂಲಕ ಪ್ರಜಾ ಜವಾಬ್ದಾರಿ ಸರಕಾರ ನಡೆಸಲು ಅಪ್ಪದ ಕೊಡಬೇಕೆಂದೂ, ದೇಶವನವರು ಕೌನ್ಸಿಲ್ ಮೂಲಕವೂ ಇನ್ನಿತರ ಸಂಘದಲ್ಲೂ ಸರಕಾರದವರನ್ನು ಕೋರುತ್ತಿದ್ದರು. ಆ ಕೋರಿಕೆಯಂತೆ ಕೆಲವು ವರ್ಷಗಳಿಂದ, ಮೊದಲು ನಾನ್ ಆಫಿಷಿಯಲ್ ವೈಸ್ ಪ್ರೆಸಿಡೆಂಟ್‌ತನ ಹೊಟ್ಟು, ಅಂದರೆ ಎಗ್ಜಿಕ್ಯೂಟಿವ್ ಕೆಲಸದ ಮೇಲೆ ಇನ್ಸ್‌ಪೆಕ್ಷನ್ ಮಾಡಿ ಅವರ ರಿಪೋರ್ಟನ್ನು ಪ್ರೆಸಿಡೆಂಟರಲ್ಲಿಯೂ ಬೋರ್ಡಿನ ಮೂಲಕ ಇಡಲು ಮಾತ್ರ ಪವರ್ ಡೆಲಿಗೇಟ್ ಮಾಡಿದರು. ಆಫೀಸ್ ಕೆಲಸಗಳ ಮತ್ತು ಪೇಪರ್‌ಗಳ ಮೇಲೆ ಆರ್ಡರ್ ಮಾಡುವ ಜವಾಬ್ದಾರಿಕೆ ಆಫಿಷಿಯಲ್ ಪ್ರೆಸಿಡೆಂಟರಲ್ಲಿಯೇ ಈ ವರೆಗೆ ಇತ್ತು. ಇಷ್ಟರ ವರೆಗೆ ನಾನ್ ಆಫಿಷಿಯಲ್ ವೈಸ್ ಪ್ರೆಸಿಡೆಂಟರವರ ಕೆಲಸ ತೃಪ್ತಿಕರವಾಗಿದೆಯೆಂದೂ ಪೂರ್ತಿ ಜವಾಬ್ದಾರಿಕೆ ನಾನ್ ಆಫಿಷಿಯಲ್ ಪ್ರೆಸಿಡೆಂಟರಿಗೆ ಕೊಡಬಹುದೆಂದು ತೀರ್ಮಾನಿಸಿ ದೇಶದವರ ಕೋರಿಕೆಯಂತೆ ಈ ಬರುವ ೧೯೩೩ನೇ ಜನವರಿ ತಿಂಗಳು ೧ನೇ ತಾರೀಖಿನಿಂದ ನಾನ್ ಆಫಿಷಿಯಲ್ ಪ್ರೆಸಿಡೆಂಟ್ ತನಕ್ಕೆ ಮಾ. ಶ್ರೀ. ಪಾಂಡಂಡ ಚಂಗಪ್ಪನವರನ್ನು ನೇಮಿಸಿದ್ದು ಕೇಳಿ ಈ ಡಿಸ್ಟ್ರಿಕ್ಟ್ ಬೋರ್ಡಿನ ಸರ್ವ ಜವಾಬ್ದಾರಿಕೆಯನ್ನು ದೇಶದವರಿಗೇ ಸರಕಾರದವರು ಬಿಟ್ಟದ್ದಕ್ಕೆ ದೇಶದ ಜನರಲ್ಲಿ ತುಂಬಾ ಸಂತೋಷವನ್ನುಂಟುಮಾಡಿದೆ. ಇದಕ್ಕೆ ದೇಶವರು ತುಂಬಾ ವಂದಿಸುತ್ತಾರೆ. ಇದೇ ಶೀಘ್ರದಲ್ಲಿ ಬಾಲಕ್ಕರುವ ಸ್ವರಾಜ್ಯದ ತಳಹದಿಯೂಗಿದೆ. ಈ ಜವಾಬ್ದಾರಿ ಉದ್ಯೋಗಕ್ಕೆ ಮಾ. ರಾ. ಶ್ರೀ. ಪಾಂಡಂಡ ಚಂಗಪ್ಪ ಯಂ. ಆಲ್, ಸಿ. ಯವರನ್ನು ನೇಮಿಸಿದ್ದು ದೇಶದ ಜನರಲ್ಲಿಯೂ, ನಾನ್ ಆಫಿಷಿಯಲ್ ಮತ್ತು ಆಫಿಷಿಯಲ್ ಮೆಂಬರುಗಳಲ್ಲಿಯೂ ತುಂಬಾ ತೃಪ್ತಿಕರವನ್ನುಂಟುಮಾಡಿದೆ. ಇವರು ಕಳೆದ ಆರು ವರ್ಷಗಳಿಂದ ಡಿಸ್ಟ್ರಿಕ್ಟ್ ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿದ್ದು, ಡಿಸ್ಟ್ರಿಕ್ಟ್ ಬೋರ್ಡಿನ ಸರ್ವ ಕೆಲಸಗಳಲ್ಲಿಯೂ ತುಂಬಾ ಅನುಭವಶಾಲಿಗಳಾದುದರಿಂದ ಈಗ ಇವರಿಗೆ ತುಂಬಾ ಜವಾಬ್ದಾರಿಕೆಯ ಕೆಲಸವನ್ನು ಸರಕಾರವು ವೈಹಿಸಿಕೊಟ್ಟದ್ದನ್ನು ನಡೆಸಲು ಶಕ್ತರೆಂಬು ದೇಶದವರಿಗೂ, ಉದ್ಯೋಗಸ್ಥರಿಗೂ ಇವರಲ್ಲಿ ನಂಬಿಕೆಯಿದೆ. ಇವರು ಈ ವೊದಲು ಡಿಸ್ಟ್ರಿಕ್ಟ್ ಬೋರ್ಡಿನ ವೈಸ್‌ಪ್ರೆಸಿಡೆಂಟ್‌ತನಕ್ಕೆ ಡಿ. ಬಿ. ಮೆಂಬರುಗಳ ಬಹುಮತದಿಂದ ಚುನಾಯಿತರಾದವರು. ಇವರು ದೇಶದ ಏಳಿಗೆಗೆ ವಿದ್ಯವೇ ಮೂಲಕಾರಣವೆಂದು ನೆನಸಿ, ವೊದಲು ಡಿ. ಬಿ. ಶಾಲೆಗಳು ಯಾವ್ಯಾವ ಕಡೆಗೆ ಬೇಕು, ಮತ್ತು ಡಿ. ಬಿ. ಯಿಂದ ಯಾವ ಸಹಾಯವು ಶಾಲೆಗಳಿಗೆ ಬೇಕಾದೀತು, ಎಂದು, ಮತ್ತು ಉಪಾದ್ಯಾಯರುಗಳ ಸ್ಥಿತಿಯು ಹ್ಯಾಗಿದೆಯೆಂದು ಅಲೋಚಿಸಿ ತಕ್ಕ ಸಲಕರಣೆಗಳನ್ನು ಡಿ. ಬಿ. ಯಿಂಗಲೂ ಸರಕಾರದಿಂದಲೂ ದೊರೆಯಲು ಒಂದು ವಿದ್ಯಾಕಮಿಟಿಯನ್ನು ನೇಮಿಸಿ, ಅವರು ದೇಶದಲ್ಲಿ ಎಲ್ಲಾ ಕಡೆ ಸುತ್ತಿ, ಅವರ ರಿಪೋರ್ಟನ್ನು ಬೋರ್ಡಿನ ಮುಂದೆ ಇಡಬೇಕೆಂದು, ತಂದ ತೀರ್ಮಾನವು ಪಾಸಾಗಿ, ಇವರನ್ನೇ ಕನ್‌ವೀನರಾಗಿ ಮಾಡಿ, ಕಮಿಟಿಯಲ್ಲಿ, ಇನ್ನೂ ಶಾಲಾ ಡಿಪ್ಯೂಟಿ ಇನ್ಸ್‌ಪೆಕ್ಟರವರೂ ಬೇರೆ ಮೆಂಬರುಗಳೂ ಕೂಡಿ, ಮಾಡಿದ ರಿಪೋರ್ಟನ್ನು ಬೋರ್ಡಿನ ಮುಂದೆ ಇಡಲಾಗಿ ರಿಪೋರ್ಟಿನಂತೆ ಸರ್ವವೂ ಪಾಸಾಗಿ ಈಗ ಅವರಂತೆ ಒಂದೊಂದೇ ಕೆಲಸವು ಜರುಗುತ್ತಾ ಬರುತ್ತದೆ. ಇದೇ ಸರಿಯಾದ ನಲ್ಲಿ ಉಪಾದ್ಯಾಯರ ಸಂಬಳವ ಬಡ್ತಿಗೆ ಕಾರಣ, ಮತ್ತು ಉಪಾದ್ಯಾಯರುಗಳಿಗೆ ಟ್ರೈನ್ಡ್ ಸ್ಕೇಲ್ ಸಂಬಳ ಹೆಚ್ಚಿನ ಗ್ರೇಡ್‌ಗಳೂ ಮೊದಲಾದ ಏರ್ಪಾಟುಗಳಾದವು. ಇವು ಪೂರ್ಣವಾಗಿ ಅನುಕೂಲತೆಗೆ ಸರಿಯಾಗಿ ನಡೆಸಿಸಬೇಕೆಂದು ತೀರ್ಮಾನಿಸಿದೆ. ಇನ್ನೂ ಅನೇಕ ಕಡೆಗಳಲ್ಲಿ ಹೊಸ ಆಸ್ಪತ್ರೆಗಳೂ ಗ್ರಾಮದ ಹೊಸ ರಸ್ತೆಗಳೂ ಹೊಳೆಗೆ ಸೇತುವೆಗಳೂ ಕುಡಿಯುವ ನೀರಿನ ಬಾವಿಗಳೂ, ಇತರ ಡಿ. ಬಿ. ಗೆ ಸಂಬಂಧಪಟ್ಟ ಕೆಲಸಗಳ ಅಭಿವೃದ್ಧಿಗಳಿಗೆ ಇವರ ಇನ್ಸ್‌ಪೆಕ್ಷನ್ ರಿಪೋರ್ಟನ್ನು, ಕಮಿಷನರ್ ಸಾಹೇಬರಲ್ಲಿಯೂ, ಡಿಸ್ಟ್ರಿಕ್ಟ್ ಬೋರ್ಡಿನವರ ಮಂಜೂರಿಯೂ ಇಟ್ಟು ನಡೆಯುತ್ತಾ ಬರುತ್ತಿದ್ದರು. ಈಗ ಸರ್ವ ಜವಾಬ್ದಾರಿಕೆಯು ಇವರಿಗೇನೇ ಸಂಪೂರ್ಣವು ಪಾಸುಆಗಿರುವುದರಿಂದ, ಇವರು ಸರಕಾರದವರ ಮತ್ತು ದೇಶದ ರೈತರ ಮತ್ತು ಡಿ. ಬಿ. ಮೆಂಬರುಗಳ ಸಹಾಯದಿಂದ ದೇಶದವರಿಗೆ ವಹಿಸಿದ ಈ ಜವಾಬ್ದಾರಿಕೆಯ ಕೆಲಸವನ್ನು ಜೆನ್ನಾಗಿ ನಡೆಸಲಿಯೆಂದು ನಾವು ಹಾರೈಸುತ್ತೇವೆ. ಇವರು ಡಿ. ಬಿ. ಕೆಲಸದಲ್ಲಿ ಅನುಭವಶಾಲಿಗಳೂ, ಮತ್ತು ಸರ್ವರ ಪ್ರೀತಿಗೆ ಪಾತ್ರರಾದುದರಿಂದ ಇವರಿಗೆ ವಹಿಸಿದ ಕೆಲಸವು ಜೆನ್ನಾಗಿ ನಡೆಸಿ ಇವರನ್ನು ಹಿಂಬಾಲಿಸುವವರಿಗೆ ಒಳ್ಳೆಯ ಮೇಲುಪಂಕ್ತಿಯನ್ನು ಹಾಕಲೆಂದು ನಮ್ಮ ಕೋರಿಕೆಯಾಗಿದೆ, ಮತ್ತು ಈ ಜವಾಬ್ದಾರಿಕೆ ಕೆಲಸ ದೇಶದವರಿಗೇ ಬಿಟ್ಟ ಸಂತೋಷವನ್ನು ಈ ಮೂಲಕ ಸರಕಾರಕ್ಕೆ ತಿಳಿಸಲು ಸಂತೋಷಪಡುತ್ತೇವೆ.

ದೇಶಹಿತೈಷಿ.

ಯು. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು, ಇವರ

ಅನುಭವ ಸಿದ್ಧ ಔಷಧಗಳು.

೧. **ಧಾತುಪುಷ್ಟಿ ಲೇಹ**—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

೨. **ಅಶೋಕಾರಿಷ್ಟ ಮತ್ತು ಮೂತ್ರೆ**—ಹೆಂಗಸರ ಮುಟ್ಟುದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ, ರಕ್ತಹೀನತೆ, ಕೈ ಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಗುಣಪಡಿಸುವದು. 1 ಬಾಟ್ಲಿ ಔಷಧಕ್ಕೂ, 1 ಡಬ್ಬಿ ಮೂತ್ರೆಗೂ ರೂ. 2—4—0; 2ಕ್ಕೆ ರೂ. 4—4—0.

೩. **ಮೇಹ ಕುಠಾರ**—ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0; 3ಕ್ಕೆ ರೂ. 7—0—0.

೪. **ಬಾಲಾಗ್ರಹ ಗುಟಿಕೆ**—ಬಾಲಾಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ ರೂ. 0—10—0. 3ಕ್ಕೆ ರೂ. 1—12—0. (52—14)

(FREE INSURANCE)

ಉಚಿತ ವಿಮಾ.

ಮ್ಯೂಚುವಲ್ ಬೆನಿಫಿಟ್ ಸ್ಕೀಂ ಎಂಬ
ಅನ್ಯೋನ್ಯ ಸಹಾಯ ಪದ್ಧತಿ.

(Mutual Benefit Scheme.)

ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಹೆಡ್ ಆಫೀಸು—ಮದ್ರಾಸ್.

ಲೈಫ್ ಇನ್‌ಷ್ಯೂರೆನ್ಸಿನ ಕಂಪೆನಿಗಳ ಕಾನೂನಿಗೆ ಅಧೀನವಾಗಿದೆ. ಸರಕಾರದಲ್ಲಿಡಬೇಕಾದ ಠೇವಣಾತಿ ಇಡಲಾಗಿದೆ.

ಈ ಮೇಲ್ಕಂಡ ಕಂಪೆನಿಯು ಅನ್ಯೋನ್ಯ ಸಹಾಯಕ್ಕಾಗಿ ಕಳೆದ ವರ್ಷ ಅಂದರೆ 1931ನೇ ಫೆಬ್ರವರಿಯಲ್ಲಿ ಮದ್ರಾಸಿನಲ್ಲಿ ಸ್ಥಾಪಿತವಾಗಿ ಈ ವರೆಗೆ 26000 ಸಾವಿರಕ್ಕೂ ಹೆಚ್ಚಾಗಿ ಪಾಲಿಸಿಗಳನ್ನು ಪಡೆದಿರುತ್ತೆ. ಈ ಮೇಲ್ಕಂಡ ಕಂಪೆನಿಗೆ ಐಶ್ವರ್ಯವಂತರೂ, ಬಡವರೂ, ವಿತಸಂಪಾದನೆಯವರೂ, ಜಾತಿ ಮತಗಳ ಬೇಧವಿಲ್ಲದೆ ಜಾತಿವಾರೂ, ಕೋಮುವಾರೂ, ಹೆಂಗಸರೂ, ಗಂಡಸರೂ ಹೆಚ್ಚು ರುಸುಂ ಕೊಡದೆಯೇ ಉಚಿತ ಜೀವ ವಿಮೆ ಮಾಡಿಕೊಳ್ಳಬಹುದು. 18 ವರ್ಷಕ್ಕೆ ಮೇಲ್ಪಟ್ಟು 60 ವರ್ಷದೊಳಗಿರುವವರು ಈ ಕಂಪೆನಿಗೆ ಸೇರಬಹುದು. ಈ ಕಂಪೆನಿಗೆ ಸೇರಲು ಇಚ್ಛಿಸುವವರು ಸುರುವಿನಲ್ಲಿ ರೂ. 5—8—0ನ್ನು ಮಾತ್ರ ಕಟ್ಟತಕ್ಕದ್ದು. ಅನಂತರ ತಿಂಗಳು ಒಂದರ 1 ರೂ. ಸ್ವಲ್ಪದರಲ್ಲೂ ದೊಡ್ಡ ಲಾಭ ದೊರೆಯುತ್ತೆ. ಆದ್ದರಿಂದ ಇಂಥಾ ಸುಸಮಯವನ್ನು ಕಳೆದುಕೊಳ್ಳಬೇಡಿ. ಈ ದಿನವೇ ಪಾಲಿಸಿಗಳನ್ನು ಹೊಂದಲು ಅರ್ಹರಾಗಿರಿ. ಇದರ ಫಲವನ್ನು ಹೊಂದಲು ಭಾಗಿಗಳಾಗಿರಿ.

ಹೆಚ್ಚಿನ ಮಾಹಿತಿಗಳಿಗೆ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಬಹುದು. ಅಲ್ಲದೆ ಇವರು ಕೊಡಗಿನ ಎಲ್ಲಾ ಕಡೆಗಳಲ್ಲಿಯೂ ತಿರುಗುತ್ತಲಿರುತ್ತಾರೆ.

ಯನ್. ಬಿ. ಕರುಂಬಯ್ಯ,
ಏಜೆಂಟ್,
ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
12—10 ನಾಪೋಕ್ಲು, (ಕೊಡಗು.

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕ ಕಂಪನಿ ೧೯೧೩

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥ್ಯ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಂಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಪಾಲು ಖರ್ಚಿಗೆ ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,
(52—20) ಮತ್ತು ಕಂಪನಿ,
ಗಿರಗಾಂವ, ಮುಂಬಯಿ,

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಹಕ್ಕು ಬಾಧ್ಯಸ್ಥರಲ್ಲಿ ಶೇಕಡ 96·6 ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ಖರ್ಚಿನ ದಾಮು ಶಾಯಿ 31% ಮಾತ್ರ.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿಯು ಬುಡದಿಂದ ತಲೆಯ ವರೆಗೂ ಇಂಡಿಯನೇ.

ವಜನದಾರರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಜಾಕೊ,
ಬ್ರಾಂಚ್ ಸೆಕ್ರೆಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ.

ಅಥವಾ

(1) ಮಿಸ್ಟರ್ ಸಿ. ಯಂ. ಪೂವಯ್ಯ,
ಲೇಡಿ ಆರ್ಗನೈಜರ್,
'ಪೂವಯ್ಯ ವಿಲ್ಲಾ,'
(12—5) ಮಡಿಕೇರಿ.

(2) ಯಂ. ಸಿ. ಅಪ್ಪಚ್ಚು,
ರಿಟಯರ್ಡ್ ಪಾರುಪತ್ಯಗಾರ್,
ಹಿಲ್ ರೋಡ್,
ಮಡಿಕೇರಿ.

EMPIRE OF INDIA
Life Assurance Company, Limited.

Established 1897.

INTERIM BONUS on Policies becoming claims before 1st March 1934 INCREASED TO

Rs. 16 per annum per Rs. 1000/- Assured on Whole Life Assurances.

and

Rs. 14 per annum per Rs. 1000/- Assured on Endowment Assurances

Head Office:—
EMPIRE OF INDIA LIFE BUILDING,
Bombay

52—13

Branch Office:—
152/3, COMMERCIAL STREET,
Bangalore.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬಾಂಕ್,
ಲಿಮಿಟೆಡ್ ಕೂ ಅಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಸ್ಟರಾಗಿದೆ.
(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	27,670— 0—0
ಜಮೂಬಂದ ತೇವಣಾತಿ	—	23,1509—13—9
ವಸೂಲಾದ ಕ್ಷೇಮನಿಧಿ	—	45,868—14—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ತೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ತೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಲ ಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪೈಸಿಡೆಂಟರು,
ಪಟ್ಟಮಾಡ ದೇವೈಯ್ಯನವರು,
ರಾವ್ ಬಹದ್ದೂರ್.

ಟ್ರೈಜರರ್
ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ
ಪಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.
ತಾರೀಖು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ಕಮ್ಮಿ ಚಂದಾವನ್ನು ಪೂರ್ತಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮಂಡೀರ ಪೂಂ ಬೆದ್ದಿಪ್ಪನವರು.

ಅಕ್ಕರ ಕೊಡಗಿಗೆ ಮೆ. ಚೌರಿರ ಮಾದೈಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮೈಯ್ಯನವರು, (ಖಾದಿಭಂಡಾರ.)

ಅಮ್ಮತ್ತಿ,—ಸಿದ್ದಾಪುರ—ಮೆ. ಐನಂಡ ಮಾಡಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುದ್ದಯ್ಯನವರು,
ಮತ್ತು, ಅರಮಣಮಾಡ ಪಿ ಕಾರ್ಯಪ್ಪನವರು,
ಹುದಿಕೇರಿ & ತಿತಿಮತ್ತಿ,—ಮೆ. ಜೆ. ಮಾದಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮಾಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧೆನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸೈಫರ್ ಕೀಪರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮೂ ಖರ್ಚಿನ ರಿಜಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಹುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯೂದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ಮಿಗಿಲಾದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ
ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿಚ್ಚು ಬತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಆಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಮೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಡಕ್ಕಾ	ಲಕ್ನೌ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾನ್	ಮಂಡಲೆ	ರಾಯಿಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಣ [52—44

ಕಣ್ಣು ಮುಚ್ಚುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ
ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವು
ವುದು ಮತ್ತು ಇದು ಮಧುರವಾಗಿ
ರುವುದರಿಂದ ಮಕ್ಕಳು ಪ್ರೀತಿ
ಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಿಗಾಂವ, ಮುಂಬಯಿ.
52—51

ಕಾಡುಬರೆದರೆ ಕಾಗನೆ
ಕ್ಯಾಟಲಾಗು ಮೂಫಿಯಾಗಿ
ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬರ್ಚಿಗಳು, ಕೋಟೆಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,
Largest Importers of Firearms and Ammunition
Cheapest priced firm in India,
26—17 210 Abdul Rehiman Street, BOMBAY.

Printed & published by P. I. Belliappa at "Kodagu" Press Mercara for "Kodagu" Ltd.